ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 22 | ಜೂನ್ 1, 1980 | ಬೆಲೆ : 50 ಪೈಸೆ

ದಿಟ್ಟ ಹೆಜ್ಜೆ

ಪಶ್ಚಿಮ ಬಂಗಾಳದ ಎಡಪಕ್ಷಗಳ ಐಕ್ಯರಂಗ ಸರಕಾರ ಸರಕಾರಿ ನೌಕರರಿಗೆ ಟ್ರೇಡ್ ಯೂನಿಯನ್ ಹಕ್ಕನ್ನು ಕೊಟ್ಟು, ಅನೇಕ ಶತಮಾನಗಳಿಂದ ಬಂದ ವಸಾಹತು ಪದ್ಧತಿಯ ಅವಶೇಷವಾದ ಗುಲಾಮಗಿರಿಯನ್ನು ಅಂತ್ಯಗೊಳಿಸಿದೆ. ಸರಕಾರಿ ನೌಕರರೂ ಇತರ ದುಡಿಯುವ ಜನರಂತೆಯೇ ಸಂಘಟನಾ ಹಕ್ಕನ್ನು ಹೊಂದಿರುವ ಜನವಿಭಾಗವೆಂಬುದನ್ನು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಮನಗಾಣುವುದು ಅಗತ್ಯ. ಇದನ್ನು ಕಾರ್ಯಾಚರಣೆಗೆ ತರುವ ದಿಟ್ಟ ಹೆಜ್ಜೆಯನ್ನಿಟ್ಟ ಪಶ್ಚಿಮ ಬಂಗಾಳದ ಸರಕಾರದ ಕ್ರಮವು ಶ್ಲಾಘನೀಯವಾಗಿದೆ.

ಸರಕಾರಿ ನೌಕರರ ಟ್ರೇಡ್‌ಯೂನಿಯನ್ ಹಕ್ಕನ್ನು ಮಾನ್ಯ ಮಾಡುವುದೆಂದರೆ ಅವರಿಗೆ ಮುಷ್ಕರ ಹೂಡುವ ಹಕ್ಕನ್ನು ಕೊಟ್ಟಂತಾಗಿದೆ. ಅದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಜ್ಯೋತಿಬಸುರವರು "ಬೇಡಿಕೆಗಳ ಬಗೆಗಿನ ವಿವಾದವನ್ನು, ಸಹಾನುಭೂತಿಯಿಂದಲೂ, ತಿಳುವಳಿಕೆಯಿಂದಲೂ ಮತ್ತು ಮಾತುಕತೆಯಿಂದಲೂ ಬಗೆಹರಿಸಲು ಸಾಧ್ಯವಿರುವಾಗ ಮುಷ್ಕರ ಹೂಡುವುದು ನಮಗೆ ಬೇಕಾದಿರುವುದಿಲ್ಲ"ವೆಂದಿದ್ದಾರೆ. ಇದು ಟ್ರೇಡ್‌ಯೂನಿಯನ್ ಚಳುವಳಿಯಲ್ಲಿ ಚೆನ್ನಾಗಿ ಪಳಗಿದ ಹಿರಿಯ ನಾಯಕನ ಅನುಭವದ ಮಾತಾಗಿದೆ. ಇದನ್ನು ಎಲ್ಲ ರಾಜ್ಯಗಳ ~~ಸರಕಾರಿ ನೌಕರರೂ ಮೆಚ್ಚು~~ವುದರಲ್ಲಿ ಸಂಶಯವಿಲ್ಲ.

ಸಂಪಾದಕೀಯ

ಸರಕಾರಿ ನೌಕರರಿಗೆ ಈ ಹಕ್ಕನ್ನು ಕೊಡುವುದರ ಜೊತೆಗೆ ಅವರ ಇತರ ನಾಗರಿಕ ಹಕ್ಕುಗಳಿಗೂ ಮನ್ನಣೆನೀಡಲಾಗಿದೆ. ಸರಕಾರಿ ನೌಕರರಿಗೆ ರೇಡಿಯೋ, ದೂರದರ್ಶನಗಳಲ್ಲಿ ಭಾಗವಹಿಸುವ ಹಕ್ಕನ್ನೂ ಮತ್ತಿತರ ಸವಲತ್ತುಗಳನ್ನೂ ನೀಡಲಾಗಿದೆ. ಇನ್ನು ಮುಂದೆ ಅವರು ಗುಲಾಮರಲ್ಲ, ನಾಗರಿಕ ಪ್ರಜೆಗಳೆಂದು ಅವರನ್ನು ಪರಿಗಣಿಸಲಾಗುವುದೆಂದು ಘೋಷಿಸಲಾಗಿದೆ. ನಿಷ್ಪಕ್ಷತೆಯಿಂದ ಸಾರ್ವಜನಿಕ ಸೇವೆಯಲ್ಲಿ ಅವರು ನಿರತರಾಗಬೇಕೆಂಬ ದೃಷ್ಟಿಯಿಂದಲೂ, ಎಲ್ಲರ ವಿಶ್ವಾಸವಿರಬೇಕೆಂಬ ದೃಷ್ಟಿಯಿಂದಲೂ, ನೌಕರರು ಯಾವುದೇ ರಾಜಕೀಯ ಪಕ್ಷದ ಸದಸ್ಯರಾಗಿರಕೂಡದೆಂದು ಅವರು ಹೇಳಿದ್ದಾರೆ.

ಸರಕಾರಿ ನೌಕರರ ಸೇವಾ ನಿಯಮದಲ್ಲಿ ಹಲವಾರು ಆಕ್ಷೇಪಾರ್ಹವಾದ ಅಂಶಗಳಿವೆ. ನಮ್ಮ ದೇಶ ವಿದೇಶೀಯರ ಗುಲಾಮಗಿರಿಯಲ್ಲಿದ್ದಾಗ ವಿದೇಶೀಯರ ಹಿತರಕ್ಷಣೆಗೆ ಈ ನಿಯಮಗಳು ರಚಿಸಲ್ಪಟ್ಟಿವೆ. ಭಾರತೀಯ ನೌಕರರು ಗುಲಾಮರೆಂದೂ, ಅಯೋಗ್ಯರಾದವರೆಂದೂ ಅವರ ಭಾವನೆಯಿತ್ತು. ಅದಕ್ಕನುಸಾರವಾಗಿ ಅವರು ನಿಯಮಾವಳಿಯನ್ನು ರಚಿಸಿದ್ದು ಸ್ವಾತಂತ್ರ್ಯಾನಂತರವೂ ಅವು ಮುಂದುವರಿದಿವೆ. ಇತ್ತೀಚೆಗೆ ಕೇರಳದಲ್ಲಿ ಪೋಲೀಸರಿಗೆ ಸಂಘಟನಾ

(ಕಡೇ ಪುಟ ನೋಡಿ)

ಭದ್ರ ಸರಕಾರದ ಅನಿಶ್ಚಿತತೆ

ಸುಭದ್ರ ಸರಕಾರ ಮತ್ತು ಕಾನೂನು ವ್ಯವಸ್ಥೆಗಳನ್ನು ಪಾಲಿಸುವ ಭರವಸೆಯೊಂದಿಗೆ ಕೇಂದ್ರದಲ್ಲಿ ಇಂದಿರಾ ಗಾಂಧಿ ಮತ್ತೆ ಅಧಿಕಾರಕ್ಕೆ ಬಂದೊಡನೆಯೇ ಕರ್ನಾಟಕ ರಾಜ್ಯದಲ್ಲಿ ಪಕ್ಷಾಂತರದ ಮೂಲಕ ಕಾಂಗ್ರೆಸ್(ಐ) ಸರಕಾರವನ್ನು ರಚಿಸಲಾಯಿತು. ಗುಂಡೂರಾಯರ ನೇತೃತ್ವದ ಕಾಂಗ್ರೆಸ್ (ಐ) ಸರಕಾರ ರಚನೆಯಾದಂದಿನಿಂದ ಇಂದಿನ ತನಕ ರಾಜ್ಯದ ರಾಜಕೀಯ ಅನಿಶ್ಚಿತತೆಯಿಂದ ತುಂಬಿದೆ; ಜನಸಾಮಾನ್ಯರ ಜೀವನ ಪರಿಸ್ಥಿತಿಯು ಹಾಳಾಗಿದೆ; ದುಡಿಯುವ ಜನರ ಮೇಲೆ ದಾಳಿ ದಬ್ಬಾಳಿಕೆಗಳೂ, ಕಾರ್ಮಿಕರ ಸಂಘಟನಾ ಹಕ್ಕುಗಳ ಮೇಲೆ ಆಕ್ರಮಣವೂ ನಡೆಯುತ್ತಿದೆ.

ಅಧಿಕಾರದಾಸೆಯಿಂದ ಪಕ್ಷಾಂತರಗೊಂಡ ಅನೇಕರಿಗೆ ನಿರಾಸೆಯಾಗಿ ಅತೃಪ್ತಿಯಾಗುವುದರೊಂದಿಗೆ, ಪಕ್ಷಾಂತರಿಗಳಿಂದಲಾಗಿ ತಮಗಿರುವ ಅವಕಾಶಗಳು ತಪ್ಪುವುದೆಂಬ ಭಯದಿಂದ ಕಾಂಗ್ರೆಸ್ ನಿಷ್ಠಾವಂತರೆನಿಸಿಕೊಂಡವರಿಗೆ ಅತೃಪ್ತಿ ಬೇರೆ, ಮುಖ್ಯಮಂತ್ರಿ ಗುಂಡೂರಾಯರು ತಮ್ಮ ಸರಕಾರ ಭದ್ರವಾಗಿದೆಯೆಂದೂ, ಸಧ್ಯ ಮಧ್ಯಂತರ ಚುನಾವಣೆ ನಡೆಯುವುದಿಲ್ಲವೆಂದೂ ಆಗಾಗ ಹೇಳುವುದೂ ಮತ್ತು ಕಾಂಗ್ರೆಸ್ಸಿನ ಹಲವಾರು ನಿಷ್ಠಾವಂತರೆನಿಸಿದವರು ಚುನಾವಣೆ ನಡೆಯಬೇಕೆನ್ನುವುದೂ ರಾಜ್ಯದಲ್ಲಿ ಇತ್ತೀಚೆಗೆ ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬಂದಂದಿನಿಂದಲೂ ಕಂಡು ಬಂದಿದೆ. ಲೋಕಸಭಾ ಚುನಾವಣೆಯಲ್ಲಿ ಚುನಾವಣಾ ಅಭ್ಯರ್ಥಿಗಳ ಆಯ್ಕೆಯಿಂದ ಮೊದಲ್ಗೊಂಡು, ಮಧ್ಯಂತರ ಚುನಾವಣೆ ನಡೆಯುವುದರ ಬಗ್ಗೆ ಶ್ರೀ ಬಂಗಾರಪ್ಪ ಮತ್ತು ಗುಂಡೂರಾಯರೊಳಗಿದ್ದ ಭಿನ್ನಾಭಿಪ್ರಾಯಗಳು ಇದೀಗ ರೆವಿನ್ಯೂ ಮಂತ್ರಿ ಬಂಗಾರಪ್ಪನವರು ಬಹಿರಂಗವಾಗೇ ಮುಖ್ಯಮಂತ್ರಿಯವರನ್ನು ಟೀಕೆ ಮಾಡುವಷ್ಟಕ್ಕೆ ಬೆಳೆದಿದೆ. ಲೇಂಡ್ ಟ್ರಿಬ್ಯೂನಲ್‌ಗಳಿಗೆ ಸದಸ್ಯರ ನೇಮಕಾತಿ ವಿಷಯದಲ್ಲಿ ಬಂಗಾರಪ್ಪನವರನ್ನು ಕಡೆಗಣಿಸಿರುವುದನ್ನು ಮತ್ತು ಕಾಂಗ್ರೆಸ್ಸಿನ ವಿದ್ಯಮಾನಗಳನ್ನು ವೀಕ್ಷಿಸಿದಲ್ಲಿ ಬಂಗಾರಪ್ಪ ಮತ್ತು ಅನೇಕರು ಬಂಡಾಯವೇಳುವುದೂ, ಮಧ್ಯಂತರ ಚುನಾವಣೆ ನಡೆಯುವ ಸಾಧ್ಯತೆಗಳೂ ಕಂಡುಬರುತ್ತಿವೆ

ಕಾರ್ಮಿಕರ ಮೇಲೆ ಗದಾ ಪ್ರಹಾರ ನಡೆಸಲು ಹೊರಟಿದ್ದ ಕಾರ್ಮಿಕ ಸಚಿವ ಶ್ರೀ ಇಬ್ರಾಹಿಂ ಅವರ ಸಹೋದರ ಖಾದರ್ ಭದ್ರಾವತಿ ಕೊಲೆಪ್ರಕರಣದಲ್ಲಿ ಭಾಗಿಯಾಗಿದ್ದು, ಇಬ್ರಾಹಿಂ ಅವರು ಮಂತ್ರಿಪದವಿಗೆ ರಾಜೀನಾಮೆ ಕೊಡಬೇಕೆಂಬ ಕೂಗು ಕಾಂಗ್ರೆಸ್ ವರ್ತುಲಗಳಿಂದಲೇ ಕೇಳಿಬರುತ್ತಲಿದೆ. ಇಬ್ರಾಹಿಂ ಅವರು ರಾಜೀನಾಮೆ ಕೊಡುವುದೇ ಸೂಕ್ತ ಎಂದು ಕಾಂಗ್ರೆಸ್ ವರಿಷ್ಠರ ಅಭಿಮತವೆಂಬ ವದಂತಿಯೂ ಇದೆ. ಈ ಮಧ್ಯೆ ಜೂನ್ ಮಧ್ಯದಲ್ಲಿ ವಿಧಾನಸಭೆ ಸೇರುವ ಮೊದಲು ಮಂತ್ರಿಮಂಡಲವನ್ನು ಪುನರ್‌ರಚನೆ ಮಾಡುವ ಮತ್ತು ವಿಸ್ತಾರ ಮಾಡುವ ಮಾತುಗಳು ಮತ್ತು ಪಕ್ಷಾಂತರಿಗಳ ಮುಂದಾಳು ಶ್ರೀಕಂಠಯ್ಯನಂತವರಿಗೆ ಗುಂಡೂರಾಯರು ಬುಲಾವ್ ಮಾಡಿದ್ದನ್ನು ನೋಡಿದರೆ ಮುಂದಿನ ಒಂದೆರಡು ವಾರಗಳಲ್ಲಿ ರಾಜ್ಯದ ಕಾಂಗ್ರೆಸ್ಸಿನೊಳಗಿನ ಭಿನ್ನಾಭಿಪ್ರಾಯಗಳು ಕಟ್ಟೆ ಒಡೆಯುವ ಸಾಧ್ಯತೆ ಇದೆ.

(ಕಡೇ ಪುಟ ನೋಡಿ)

ಅಸ್ತವ್ಯಸ್ತ ಆಡಳಿತ

ಶ್ರೀಮತಿ ಇಂದಿರಾಗಾಂಧಿಯವರು ಕೇಂದ್ರದಲ್ಲಿ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಂಡ ದಿನದಿಂದಲೇ ರಾಜಕೀಯ ಸೇಡಿನ ನೀತಿಯನ್ನೇ ಅನುಸರಿಸುತ್ತಿದೆ. ಇದು ಶ್ರೀಮತಿಗಾಂಧಿಯವರು ಅಧಿಕಾರಕ್ಕೆ ಬರುವ ಮೊದಲು "ಆದದ್ದನ್ನು ಮರೆತುಬಿಡುತ್ತೇನೆ" ಎಂದು ಹೇಳಿದ್ದರ ತದ್ವಿರುದ್ಧ. ಅಧಿಕಾರಶಾಹಿಗಳು ಹಾಗೂ ಪೋಲೀಸರು ನಿಷ್ಕ್ರಿಯವಾಗಿರುವುದಲ್ಲದೆ ಸ್ಥೈರ್ಯವನ್ನೇ ಕಳೆದುಕೊಂಡಿದ್ದಾರೆ. ಸುಭದ್ರ ಸರಕಾರದ ಆಶ್ವಾಸನೆ, ಕೆಲಸ ಮಾಡಬಲ್ಲ ಸರಕಾರ ನೀಡುವ ಪೊಳ್ಳು ಘೋಷಣೆಗಳನ್ನು ನೀಡಿ ಜನಗಳನ್ನು ಮರುಳು ಮಾಡಿ ಅಧಿಕಾರಕ್ಕೆ ಬಂದ ಶ್ರೀಮತಿ ಗಾಂಧಿಯವರ ನೂರು ದಿನಗಳ ಆಡಳಿತ ಯಾವ ಭರವಸೆಯನ್ನೂ ಈಡೇರಿಸದ ವಿಫಲ ಸರಕಾರವಾಗಿದೆ.

ವಿರೋಧ ಪಕ್ಷಗಳನ್ನು ಉರುಳಿಸುವುದರಲ್ಲಿಯೇ ಆಸಕ್ತಿ ಹೊಂದಿರುವ ಶ್ರೀಮತಿಗಾಂಧಿಯವರಿಗೆ ಆಡಳಿತವನ್ನು ನೋಡಿಕೊಳ್ಳಲು ಸ್ವಲ್ಪ ಸಮಯವೂ ಸಿಕ್ಕುತ್ತಿಲ್ಲ. ತಮ್ಮ ಮಂತ್ರಿಮಂಡಳದಲ್ಲಿ ಖಾಲಿ ಇರುವ ಮುಖ್ಯ ಖಾತೆಗಳಿಗೆ ಮಂತ್ರಿಗಳನ್ನು ನೇಮಿಸುವುದೂ ಸಾಧ್ಯವಾಗಿಲ್ಲ. ರಾಯಭಾರಿಗಳ ಹುದ್ದೆಗಳನ್ನು ಅದರಲ್ಲೂ ಮಾಸ್ಕೋ, ಲಂಡನ್ ಮತ್ತು ವಾಷಿಂಗ್ಟನ್‌ನಂತಹ ಮುಖ್ಯ ರಾಜಧಾನಿಗಳಲ್ಲಿ ಖಾಲಿ ಬಿಡಲಾಗಿದೆ ಸಿಕ್ಕಿರುವ ವರದಿಗಳ ಪ್ರಕಾರ ಏಳು ಕಾರ್ಯದರ್ಶಿ ಸ್ಥಾನಗಳನ್ನು ಸಹಾ ತುಂಬಿಸಿಲ್ಲ. ಇದರ ಪರಿಣಾಮವಾಗಿ ಅನೇಕ ಮಂತ್ರಿಗಳ ಖಾತೆಗಳು ಕೆಲಸ ಮಾಡಲಾರದ ಪರಿಸ್ಥಿತಿಗೆ ಬಂದಿವೆ. ಕೃಷಿ ಮಂತ್ರಾಲಯದ ಆಹಾರಶಾಖೆ, ಗೃಹ ಖಾತೆಯ ಅಧಿಕೃತ ಭಾಷಾ ವಿಭಾಗ ಹಾಗೂ ಕಂಪನಿ ವ್ಯವಹಾರಗಳ ಇಲಾಖೆಯಲ್ಲಿ ಆಡಳಿತಾಧಿಕಾರಿಗಳೇ ಇಲ್ಲ. ರಕ್ಷಣಾ ಖಾತೆಗೆ ಕ್ಯಾಬಿನೆಟ್ ದರ್ಜೆಯ ಮಂತ್ರಿಯೇ ಇಲ್ಲದಿರುವುದರಿಂದ ಉಸ್ತುವಾರಿ ಕಾರ್ಯದರ್ಶಿಯೊಬ್ಬರು ಅವರ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಾರೆ. ರಕ್ಷಣಾ ಉತ್ಪಾದನೆ ಇಲಾಖೆಯ ಕಾರ್ಯದರ್ಶಿಗಳಿಗೆ ರಕ್ಷಣಾ ಇಲಾಖೆ ಕಾರ್ಯದರ್ಶಿಗಳ ಕೆಲಸವನ್ನು ನೋಡಿಕೊಳ್ಳಲು ಆಜ್ಞಾಪಿಸಲಾಗಿದೆ. ಇಂದಿರಾ ಗಾಂಧಿ ಸರ್ಕಾರ ಹುಡುಕಲು ಅಸಾಧ್ಯವಾಗಿರುವ ಮತ್ತೊಂದು ಮುಖ್ಯ ಹುದ್ದೆ ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಸ್ಥಾನ. ಅಲ್ಲದೆ ಅಲ್ಪಸಂಖ್ಯಾತರ ಆಯೋಗ ಹಾಗೂ ಭಾರತದ ರಾಷ್ಟ್ರಪತಿಗಳ ಕಾರ್ಯದರ್ಶಿಗಳನ್ನೂ ನೇಮಿಸಲು ಸಾಧ್ಯವಾಗಿಲ್ಲ.

ಒಂದುಕಡೆ ಈ ಸ್ಥಾನಗಳನ್ನು ತುಂಬಲು ಅಭ್ಯರ್ಥಿಗಳಿಲ್ಲ ಮತ್ತೊಂದು ಕಡೆ ದೊರೆತ ವರದಿಯಂತೆ ಸುಮಾರು ಅರವತ್ತು ಜನ ಹಿರಿಯ ಐ. ಎ. ಎಸ್. ಅಧಿಕಾರಿಗಳು ತಮಗೆ ಜಾಗವನ್ನು ತೋರಿಸಿಲ್ಲವೆಂದು, ತಮ್ಮ ಮುಂದಿನ ಸ್ಥಾನದ ಬಗ್ಗೆ ಕಾಯುತ್ತಾ ಕುಳಿತಿದ್ದಾರೆ. ಇದೆಲ್ಲಕ್ಕಿಂತ ಸರಕಾರದ ಖಜಾನೆಯಿಂದ ಕೆಲಸವಿಲ್ಲದೆ ಕುಳಿತಿರುವ ಐ. ಎ. ಎಸ್. ಅಧಿಕಾರಿಗಳಿಗೆ ಬಿಟ್ಟಿ ಸಂಬಳ ಸಿಗುತ್ತಿದೆ. ಸೂಕ್ತ ಸ್ಥಾನಗಳಿಗಾಗಿ ಕಾಯುತ್ತಿರುವ ಈ ಅಧಿಕಾರಿಗಳಿಗಾಗಿ ಪ್ರತಿ ತಿಂಗಳೂ ಲಕ್ಷಾಂತರ ರೂಪಾಯಿಗಳು ವೆಚ್ಚವಾಗುತ್ತಿವೆ.

ದೆಹಲಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ಶ್ರೀಮತಿಗಾಂಧಿಯವರು ಅಧಿಕಾರಕ್ಕೆ ಬಂದ ಕೂಡಲೇ ಅಧಿಕಾರಿಗಳ ಪುನರ್‌ವಿಂಗಡಣೆ ಪ್ರಾರಂಭವಾಯಿತು. ಒಬ್ಬರಾದ ನಂತರ ಮತ್ತೊಬ್ಬರಂತೆ ಇಬ್ಬರು ಉಪ-ಛೇರ್‌ಮನ್‌ಗಳನ್ನು ಬದಲಾಯಿಸಲಾಯಿತು. ಸಂಜಯಗಾಂಧಿಯ ಕೃಪೆ ಪಡೆದವರೊಬ್ಬರಿಗೆ ಆ ಸ್ಥಾನವನ್ನು ನೀಡಲಾಯಿತು. ಜೊತೆಗೆ ಹಿಂದಿನ ಇಬ್ಬರು ಉಪ-ಛೇರ್‌ಮನ್ನರೂ ತಮ್ಮ ಸಂಬಳವನ್ನು ಪಡೆಯುತ್ತಿದ್ದಾರೆ. ಕೆಲಸ ಮಾಡುವ ಒಬ್ಬ ಉಪ-ಛೇರ್‌ಮನ್ ಹಾಗೂ ಕೆಲಸ ಮಾಡದ ಇಬ್ಬರಿಗಾಗಿ ದೆಹಲಿ ಅಭಿವೃದ್ಧಿ ಪ್ರಾಧಿಕಾರ ಒಂದು ಲಕ್ಷ ರೂಪಾಯಿಗಿಂತಲೂ ಹೆಚ್ಚು ಖರ್ಚು ಮಾಡುತ್ತಿದೆ. ಆದರೆ ರಾಜಧಾನಿಯ ಅಭಿವೃದ್ಧಿಗೆ ಅವರ ಬಳಿ ಹಣವಿಲ್ಲ.

(ಕಡೇ ಪುಟ ನೋಡಿ)

ಮೇ ೩೦, ೧೯೭೦ ಸಿ.ಐ.ಟಿ.ಯು. ಸ್ಥಾಪನೆಯ ಹತ್ತನೆ ವಾರ್ಷಿಕೋತ್ಸವ

[ಹಿಂದಿನ ಸಂಚಿಕೆಯಿಂದ ಮುಂದುವರಿದುದು]

ಯು.ಸಿ.ಟಿ.ಯು. ಪ್ರಯತ್ನ ಮತ್ತು ಪಶ್ಚಿಮ ಬಂಗಾಳದಲ್ಲಿ ಮುಂದುವರೆದ ಅರೆಫ್ಯಾಸಿಸ್ಟ್ ದಬ್ಬಾಳಿಕೆಯಡಿಯಲ್ಲಿಯೂ ಸಹ ಆ ರಾಜ್ಯದ ಕಾರ್ಮಿಕರು ಮುಂದುವರೆಸಿದ ವಿವಿಧ ರೂಪಗಳ ಹೋರಾಟಗಳು ಸಿ.ಐ.ಟಿ.ಯು. ಕಾರ್ಮಿಕರ ಮತ್ತು ಕಾರ್ಮಿಕ ಸಂಘಟನೆಗಳ ಐಕ್ಯತೆಗಾಗಿ ನಡೆಸುತ್ತಿದ್ದ ಹೋರಾಟಕ್ಕೆ ಸಹಾಯಕವಾದುವು ಮತ್ತು ಸ್ಫೂರ್ತಿ ಇತ್ತುವು. 1973ರ ಅಂತ್ಯದ ವೇಳೆಗೆ ಪರಿಸ್ಥಿತಿ ಮತ್ತೂ ಬದಲಾಯಿಸಿತು. ಪ್ರಜಾಪ್ರಭುತ್ವ ಚಳುವಳಿ ಬಲಿಷ್ಠವಾಗಿಲ್ಲದ ಕರ್ನಾಟಕದಲ್ಲಿಯೂ ಸಹ ಪ್ಲಾಂಟೇಷನ್ ಕೈಗಾರಿಕೆಯಲ್ಲಿ 1973ರ ಡಿಸೆಂಬರ್ ಕೊನೆಯಲ್ಲಿ ಸಿ. ಐ. ಟಿ. ಯು., ಎಚ್. ಎಂ. ಎಸ್., ಐ. ಎನ್. ಟಿ. ಯು. ಸಿ. ಮತ್ತು ಯಾವ ಕೇಂದ್ರಕ್ಕೂ ಸೇರಿರದ ಕಾರ್ಮಿಕ ಸಂಘಗಳು ಜಂಟಿಯಾಗಿ ಮೂರು ದಿವಸ ಮುಷ್ಕರ ನಡೆಸಿದುವು. ಆ ಸಂದರ್ಭದಲ್ಲಿ ಜಯಪುರದಲ್ಲಿ ನಡೆದ ತೋಟಕಾರ್ಮಿಕರ ಜಂಟಿ ಸಮಾವೇಶಕ್ಕೆ ಸಿ. ಐ. ಟಿ. ಯು. ಮುಖಂಡ ಕಾಂ. ಮನೋರಂಜನ್ ರಾಯ್ ಮುಖ್ಯ ಅತಿಥಿಯಾಗಿ ಬಂದಿದ್ದರು.

1974 ರೈಲ್ವೆ ಕಾರ್ಮಿಕರ ಅನೇಕ ಸಂಘಗಳನ್ನು ಒಂದೇ ವೇದಿಕೆಗೆ ತರಲು ಸಾಧ್ಯವಾಯಿತು. ಎನ್. ಸಿ. ಸಿ. ಆರ್. ಎಸ್. (ರೈಲ್ವೆ ಕಾರ್ಮಿಕರ ಹೋರಾಟದ ರಾಷ್ಟ್ರೀಯ ಸಮನ್ವಯ ಸಮಿತಿ) ರಚನೆಯಾಯಿತು. 1974ರ ಮೇಯಲ್ಲಿ ಮೂರು ವಾರಗಳ ಕಾಲ ನಡೆದ ರೈಲ್ವೆ ಮುಷ್ಕರ ಚರಿತ್ರಾರ್ಹವಾದುದು. ಇಷ್ಟು ದೀರ್ಘವಾದ ರೈಲ್ವೆ ಮುಷ್ಕರ ಪ್ರಪಂಚದ ಯಾವ ದೇಶದಲ್ಲಿಯೂ ನಡೆದಿಲ್ಲ. ಈ ಮುಷ್ಕರವು ಕಾರ್ಮಿಕ ಚಳುವಳಿಯಲ್ಲಿ ಕೈಗಾರಿಕಾ ಕಾರ್ಮಿಕರಿಗೂ ಆಫೀಸು ನೌಕರರಿಗೂ ಇದ್ದ ಅಂತರವನ್ನು ಬಹಳ ಕಡಿಮೆ ಮಾಡಿತು ಎಂದರೆ ತಪ್ಪಾಗಲಾರದು. ರೈಲ್ವೆ ಕಾರ್ಮಿಕರ ಮುಷ್ಕರದ ಬೆಂಬಲಾರ್ಥವಾಗಿ ಮೇ 15 ರಂದು ದೇಶಾದ್ಯಂತ ಸಾರ್ವತ್ರಿಕ ಮುಷ್ಕರ ನಡೆಯಿತು ಅಖಿಲಭಾರತ ಮಟ್ಟದಲ್ಲಿ, ವಿಶಾಲ ಪ್ರಮಾಣದಲ್ಲಿ ನಡೆದ ಈ ಸೌಹಾರ್ದ ಮುಷ್ಕರ ದೇಶದ ಕಾರ್ಮಿಕ ಚಳುವಳಿಯ ಇತಿಹಾಸದಲ್ಲೇ ಪ್ರಥಮ. ಐ. ಎನ್. ಟಿ. ಯು. ಸಿ. ಯ ಹೊರತಾಗಿ ಉಳಿದೆಲ್ಲಾ ಕಾರ್ಮಿಕ ಸಂಘಗಳು ರೈಲ್ವೆ ಮುಷ್ಕರಕ್ಕೆ ಕರೆಕೊಟ್ಟಿದ್ದುವು. ಮೇ 15ರ ಮುಷ್ಕರಕ್ಕೆ ಐ. ಎನ್. ಟಿ. ಯು. ಸಿ. ಹೊರತಾದ ಕೇಂದ್ರ ಕಾರ್ಮಿಕ ಸಂಘಟನೆಗಳಲ್ಲದೆ ಅವುಗಳ ಹೊರಗಿರುವ ಆಲ್ ಇಂಡಿಯಾ ಇನ್ಷೂರೆನ್ಸ್ ಎಂಪ್ಲಾಯೀಸ್ ಅಸೋಸಿಯೇಷನ್, ಆಲ್ ಇಂಡಿಯಾ ಬ್ಯಾಂಕ್ ಎಂಪ್ಲಾಯೀಸ್ ಅಸೋಸಿಯೇಷನ್‌ನಂತಹ ಅಖಿಲ ಭಾರತ ಕಾರ್ಮಿಕ ಒಕ್ಕೂಟಗಳೂ ಕರೆಕೊಟ್ಟಿದ್ದುವು. ರೈಲ್ವೆ ಮುಷ್ಕರಡ ಪ್ರಶ್ನೆಯ ಮೇಲೆ ಅಷ್ಟು ವಿಶಾಲ ಪ್ರಮಾಣದ ಐಕ್ಯತೆ ಬೆಳೆಯಿತು.

ಇಂದಿರಾ ಕಾಂಗ್ರೆಸ್ ಸರ್ಕಾರವು ರೈಲ್ವೆ ಮುಷ್ಕರವನ್ನು ಸದೆಬಡೆಯಲು ಪಾಶವೀ ಕ್ರಮಗಳನ್ನು ಅನುಸರಿಸಿತು. ಇದಕ್ಕೆ ಡಾಂಗೆಯವರ ಪರೋಕ್ಷ ಸಹಕಾರ. ಬೆಳೆದು ಬಂದಿದ್ದ ಕಾರ್ಮಿಕ ಐಕ್ಯತೆಯನ್ನು ಒಡೆಯುವುದರಲ್ಲಿ ಡಾಂಗೆಯವರು ಪ್ರಮುಖ ಪಾತ್ರವನ್ನು ವಹಿಸಿದರು. ಆ ತರುವಾಯ 1978ರವರೆಗೆ ಡಾಂಗೆಯವರ ಎ. ಐ. ಟಿ. ಯು. ಸಿ. ಯು ಕಾರ್ಮಿಕವರ್ಗದ ಸಂಯುಕ್ತ ಚಳುವಳಿಯ ಹೊರಗೆ ಉಳಿದು ಐ. ಎನ್. ಟಿ. ಯು. ಸಿ. ಯ ಜತೆಯಲ್ಲಿ ಬಂಡವಾಳಗಾರರು ಮತ್ತು ಕಾಂಗ್ರೆಸ್ ಸರ್ಕಾರಗಳು ನಡೆಸುವ ಶೋಷಣೆ ಮತ್ತು ದಬ್ಬಾಳಿಕೆಗಳನ್ನು ಒಂದಲ್ಲಾ ಒಂದು ರೀತಿಯಲ್ಲಿ ಸಮರ್ಥಿಸಿದುವು.

ಇದರಿಂದ ಉತ್ತೇಜನ ಪಡೆದ ಇಂದಿರಾ ಕಾಂಗ್ರೆಸ್ ಸರ್ಕಾರವು 1974ರ ಜುಲೈಯಲ್ಲಿ ಕಡ್ಡಾಯ ಠೇವಣಾತಿಯ ಸುಗ್ರೀವಾಜ್ಞೆಯನ್ನು ಹೊರಡಿಸಿ ವೇತನ ಸ್ತಂಭನವನ್ನು ಘೋಷಿಸಿತು. ಹಲವಾರು ಕೈಗಾರಿಕೆಗಳಲ್ಲಿ ವೇತನದ ಪುನರ್ವಿಮರ್ಶೆಯ ಬಗ್ಗೆ ಸಂಧಾನಗಳು ನಡೆಯುತ್ತಿದ್ದವು ಹಠಾತ್ತನೆ ನಿಂತುಹೋದುವು, ಮುಂದುವರೆದ ಕೆಲವು ಕಡೆ ಮಾಲೀಕರು ತಮ್ಮ ಬಿಗಿಮುಷ್ಟಿಯನ್ನು ತೋರಿಸಿದರು.

ಈ ಧೋರಣೆಯ ಅನುಷ್ಠಾನವನ್ನು ಪ್ರಥಮವಾಗಿ ವಿರೋಧಿಸಿದ ರಾಜಾಸ್ತಾನದ ಭರತ್‌ಪುರದಲ್ಲಿರುವ ಬಿರ್ಲಾ ಕಾರ್ಖಾನೆಯ ಕಾರ್ಮಿಕರು ನೆತ್ತರನ್ನರ್ಪಿಸಿದರು. ಗೋಲೀಬಾರಿನಲ್ಲಿ ಮೂವರು ಪ್ರಾಣಾರ್ಪಣೆ ಮಾಡಿದರು-ವೇತನಸ್ತಂಭನದ ವಿರುದ್ಧ ದೇಶಾದ್ಯಂತ ಭುಗಿಲೆದ್ದ ಚಳುವಳಿಗೆ ನಾಂದಿ ಹಾಡಿದರು.

ವೇತನಸ್ತಂಭನದ ವಿರುದ್ಧ ನವದೆಹಲಿಯಲ್ಲಿ ದುಡಿಯುವ ಜನತೆಯ ರಾಷ್ಟ್ರೀಯ ಸಮಾವೇಶ ಆಗಸ್ಟಿನಲ್ಲಿ ನಡೆಯಿತು. ಸಮಾವೇಶದ ಕರೆಗೆ ಓಗೊಟ್ಟು ರಾಜ್ಯಮಟ್ಟದ, ಪ್ರಾದೇಶಿಕ, ಜಿಲ್ಲಾ ಮಟ್ಟದ ಹಾಗೂ ಸ್ಥಳೀಯ ಸಮಾವೇಶಗಳು ನಡೆದುವು. 1974ರ ಸೆಪ್ಟಂಬರಿನಲ್ಲಿ ಹುಬ್ಬಳ್ಳಿಯಲ್ಲಿ, ನವೆಂಬರಿನಲ್ಲಿ ಚಿಕ್ಕಮಗಳೂರಿನಲ್ಲಿ ಪ್ರಾದೇಶಿಕ ಸಮಾವೇಶಗಳೂ, 75ರ ಫೆಬ್ರವರಿಯಲ್ಲಿ ಚಿಕ್ಕಬಳ್ಳಾಪುರದಲ್ಲಿ ಕೋಲಾರಜಿಲ್ಲಾ ಸಮಾವೇಶವೂ ಚಾಮರಾಜನಗರದಲ್ಲಿ ಸಳೀಯ ಸಮಾವೇಶವೂ ನಡೆದುವು.

ವೇತನಸ್ತಂಭನ ವಿರೋಧಿ ಚಳುವಳಿಯಲ್ಲಿ ಎ. ಐ. ಟಿ. ಯು. ಸಿ., ಎಚ್. ಎಂ. ಎಸ್. ನ ಒಂದು ವಿಭಾಗ ಮತ್ತು ಐ. ಎನ್. ಟಿ. ಯು. ಸಿ. ಭಾಗವಹಿಸಲಿಲ್ಲ.

ಕೈಗಾರಿಕೆಯಲ್ಲಿ ಹಿಂದೆಗೆತ ಬೆಳೆಯುತ್ತಿದ್ದು ಲೇ ಆಫ್, ರಿಟ್ರೆಂಚ್‌ಮೆಂಟುಗಳು ಕಾರ್ಮಿಕರನ್ನು ಬಾಧಿಸುತ್ತಿದ್ದು ಭಯೋತ್ಪಾದಕ ದಬ್ಬಾಳಿಕೆಯ ಮೂಲಕ ಉಕ್ಕೇರುತ್ತಿದ್ದ ಪ್ರತಿಭಟನೆಯನ್ನು ಹತ್ತಿಕ್ಕುತ್ತಿದ್ದ ಹಿನ್ನೆಲೆಯಲ್ಲಿ 1975ರ ಮೇಯಲ್ಲಿ ಮುಂಬೈಯಲ್ಲಿ ಸಿ. ಐ. ಟಿ. ಯು. / ಮೂರನೆಯ ಅಖಿಲಭಾರತ ಸಮ್ಮೇಳನ ನಡೆಯಿತು. ಆ ವೇಳೆಗೆ ಇಂದಿರಾ ಕಾಂಗ್ರೆಸ್ ಸರ್ಕಾರದ ರಾಜಕೀಯ ವಿರೋಧ ಪಕ್ಷಗಳ ದಾಳಿಯ ಸೂಚನೆ ಪ್ರಕಟವಾಯಿತು. ತ್ರಿಪುರದಲ್ಲಿ ಕಾಂ. ನೃಪೇನ್ ಚಕ್ರವರ್ತಿ ಮತ್ತಿತರ ಶಾಸಕರನ್ನು ಮೀಸಾದನ್ವಯ ಬಂಧಿಸಿ ಕಡಲೂರಿನ ಕಾರಾಗೃಹಕ್ಕೆ ಕಳುಹಿಸಲಾಯಿತು.

ಸಮ್ಮೇಳನ ಮುಗಿದ ಒಂದು ತಿಂಗಳಿಗೆ ಜೂನ್ 26ರಂದು ಆಂತರಿಕ ತುರ್ತು ಪರಿಸ್ಥಿತಿಯನ್ನು ಹೇರಿ ವಿರೋಧ ಪಕ್ಷಗಳ ಮುಖಂಡರನ್ನೂ ಕಾರ್ಮಿಕ ಧುರೀಣರನ್ನೂ ಬಂಧಿಸಿ

— ಸಿ. ನಂಜುಂಡಪ್ಪ

ಇಂದಿರಾಗಾಂಧಿ ಸರ್ಕಾರವು ಪ್ರಜಾಪ್ರಭುತ್ವ ಹಕ್ಕುಗಳು, ನಾಗರೀಕ ಸ್ವಾತಂತ್ರ್ಯ ಮತ್ತು ಟ್ರೇಡ್‌ಯೂನಿಯನ್ ಹಕ್ಕುಗಳನ್ನು ಮೊಟಕುಗೊಳಿಸಿತು. ಸಿ. ಐ. ಟಿ. ಯು. ಮುಖಂಡರ ಮೇಲೆ ವಾರೆಂಟು, ಬಂಧನ, ರಾಜಾಸ್ಥಾನದಲ್ಲಿ ಸಿ. ಐ. ಟಿ. ಯು. ಸಂಘಗಳ ಕಾರ್ಯಕಾರಿ ಸಮಿತಿ ಸದಸ್ಯರನ್ನೂ ಸಹ ಬಂಧಿಸಲಾಯಿತು. ಉತ್ತರ ಪ್ರದೇಶದಲ್ಲಿ ಕಾರ್ಮಿಕ ಸಂಘಗಳ ಕಛೇರಿಗೆ ಬೀಗ ಹಾಕಲಾಯಿತು ಕರ್ನಾಟಕದಲ್ಲೂ ಸಹ ಕಾರ್ಮಿಕ ಮುಖಂಡರ ಬಂಧನವಾಯಿತು. ವಿ. ಜೆ. ಕೆ ನಾಯರ್, ಕೆ. ಸುಕುಮಾರ್, ಎಂ. ಬಿ. ರಾಧಾಕೃಷ್ಣನ್ ಮತ್ತು ಫಿಲಿಪ್ಪರನ್ನು ಡಿ. ಐ. ಆರ್. ನಲ್ಲಿ ಬಂಧಿಸಿದರೆ, ಎಸ್. ಸೂರ್ಯನಾರಾಯಣ ರಾವ್ ಮತ್ತು ಜಗನ್ನಾಥರನ್ನು ಮೀಸಾದಲ್ಲಿ ಬಂಧಿಸಲಾಯಿತು. ಈ ಕಾಲಾವಧಿಯಲ್ಲಿ ಇಂದಿರಾ ಸರ್ಕಾರವು ಬೋನಸ್ ಕಡಿತದ ಸುಗ್ರೀವಾಜ್ಞೆಯನ್ನು ಹೊರಡಿಸಿ ಲಕ್ಷಾಂತರ ಕಾರ್ಮಿಕರ ಬೋನಸ್ಸನ್ನು ಕಿತ್ತುಕೊಂಡಿತು. "ಬೋನಸ್ ಕಡಿತದಿಂದ ಕಾರ್ಮಿಕರಿಗೆ ಆಗಿರುವ ನಷ್ಟಕ್ಕಿಂತಲೂ ಎಮರ್ಜೆನ್ಸಿಯಿಂದ ಆಗಿರುವ ಲಾಭ ಹೆಚ್ಚು" ಎಂದು ಡಾಂಗೆ ಸರ್ಕಾರದ ಕಾರ್ಮಿಕ ವಿರೋಧಿ-ಪ್ರಜಾಪ್ರಭುತ್ವ ವಿರೋಧಿ ಕ್ರಮವನ್ನು ಸಮರ್ಥಿಸಿದರು. ಐ. ಎನ್. ಟಿ. ಯು. ಸಿ., ಎ. ಐ. ಟಿ. ಯು. ಸಿ. ಮತ್ತು ಎಚ್. ಎಂ. ಎಸ್. ನ ಒಂದು ವಿಭಾಗ ಆಂತರಿಕ ತುರ್ತುಪರಿಸ್ಥಿತಿಯನ್ನೂ ಇಂದಿರಾ ಸರ್ಕಾರವನ್ನೂ ಬೆಂಬಲಿಸುತ್ತಿದ್ದುದರಿಂದ ಇಡೀ ಕಾರ್ಮಿಕ ವರ್ಗವನ್ನು ಇಂದಿರಾ ಸರ್ಕಾರದ ಈ ಸರ್ವಾಧಿಕಾರಿ ಆಳ್ವಿಕೆಯ ವಿರುದ್ಧ ಸಮರಕ್ಕೆ ಸಜ್ಜುಗೊಳಿಸಲಾಗಲಿಲ್ಲ.

ಆದರೂ ಸಹ ಆಂತರಿಕ ತುರ್ತು ಪರಿಸ್ಥಿತಿಯ ಕಾಲಾವಧಿಯಲ್ಲಿ 20¨0 ಮುಷ್ಕರಗಳು ನಡೆದಿವೆ

1977ರ ಲೋಕಸಭಾ ಚುನಾವಣೆಯ ನಂತರ ಜನತಾ ಸರ್ಕಾರವು ಪ್ರಜಾಪ್ರಭುತ್ವ ಮತ್ತು ಟ್ರೇಡ್ ಯೂನಿಯನ್ ಹಕ್ಕುಗಳನ್ನು ಮರಳಿ ಕೊಟ್ಟ ನಂತರ ಸಿ. ಐ. ಟಿ. ಯು. ಕಾರ್ಮಿಕ ಸಂಘಗಳ ಐಕ್ಯತೆಯನ್ನು ಸಂಘಟಿಸುವ ತನ್ನ ಪ್ರಯತ್ನವನ್ನು ಮುಂದುವರಿಸಿತು. ಸರ್ವಾಧಿಕಾರವನ್ನು ಪ್ರತಿಷ್ಠಾಪಿಸಿದ ಸಂವಿಧಾನದ 42ನೆಯ ತಿದ್ದುಪಡಿಯನ್ನು ತೆಗೆದುಹಾಕುವುದು, 'ಸಂಬಳ, ವರಮಾನ ಮತ್ತು ಬೆಲೆಗಳ' ನೀತಿ-ಈ ಎರಡು ವಿಷಯಗಳಿಗೆ ಸಂಬಂಧಿಸಿದ ಅಖಿಲ ಭಾರತ ಕಾರ್ಮಿಕ ಸಮಾವೇಶವೊಂದು ನವದೆಹಲಿಯಲ್ಲಿ 1977ರ ಸೆಪ್ಟೆಂಬರಿನಲ್ಲಿ ನಡೆಯಿತು. ಎ. ಐ. ಟಿ. ಯು. ಸಿ. ಮತ್ತು ಐ. ಎನ್. ಟಿ. ಯು. ಸಿ. ಗಳ ಬಗ್ಗೆ, ಅವುಗಳು ಆಂತರಿಕ ತುರ್ತುಪರಿಸ್ಥಿತಿಯ ಅವಧಿಯಲ್ಲಿ ತಳೆದ ಧೋರಣೆಯಿಂದಾಗಿ, ಇತರ ಸಂಘಗಳಿಗೆ ಬಲವಾದ ವಿರೋಧವಿದ್ದುದರಿಂದ ಈ ಎರಡು ಸಂಘಟನೆಗಳನ್ನು ಸಮಾವೇಶಕ್ಕೆ ಆಮಂತ್ರಿಸಲಿಲ್ಲ. 1977 ಡಿಸೆಂಬರ್ 23, 24ರಂದು ಹೈದರಾಬಾದಿನಲ್ಲಿ ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಅಖಿಲಭಾರತ ಸಮ್ಮೇಳನದಲ್ಲಿ ಬಿ. ಎಂ. ಎಸ್. ಮತ್ತು ಎಚ್. ಎಂ. ಪಿ. ಮುಖಂಡರು ಐ. ಎನ್. ಟಿ. ಯು. ಸಿ. ಭಾಗವಹಿಸುವುದಕ್ಕೆ ಒಪ್ಪಿಸಬೇಕಾದರೆ ಸಿ. ಐ. ಟಿ. ಯು. ಬಹಳ ಕಷ್ಟಪಡಬೇಕಾಯಿತು.

ಜನತಾ ಸರ್ಕಾರವು ಕೈಗಾರಿಕಾ ಸಂಬಂಧಗಳ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದ ನಂತರ ಈ ಕಪ್ಪು ಮಸೂದೆಯ ವಿರುದ್ಧ ಅತ್ಯಂತ ವಿಶಾಲವಾದ ಕಾರ್ಮಿಕ ಸಂಘಗಳ ಐಕ್ಯತೆಯನ್ನು ಸಂಘಟಿಸಲಾಯಿತು. 19-11-78ರಂದು ನವದೆಹಲಿಯಲ್ಲಿ ಈ ಮಸೂದೆಯ ವಿರುದ್ಧ ನಡೆದ ಅಖಿಲ ಭಾರತ ಸಮಾವೇಶದಲ್ಲಿ ಮತ್ತು 20 ರಂದು ಸಂಸತ್ತಿನ ಮುಂದೆ ನಡೆದ ಪ್ರದರ್ಶನದಲ್ಲಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಈವರೆಗಿನ ನಮ್ಮ ದೇಶದ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿ ಇದು ಅತ್ಯಂತ ಹೆಚ್ಚು ವಿಶಾಲವಾದ ಕಾರ್ಮಿಕರ ಐಕ್ಯಕಾರ್ಯಾಚರಣೆ.

1979ರ ಜುಲೈಯಲ್ಲಿ ಬೆಂಗಳೂರಿನಲ್ಲಿ ನಡೆದ ಸಾರ್ವಜನಿಕ ಕ್ಷೇತ್ರದ ಅಖಿಲ ಭಾರತ ಸಮ್ಮೇಳನದಲ್ಲಿ ಸೆಪ್ಟೆಂಬರ್ 14ರಂದು ನಡೆದ ಅಖಿಲಭಾರತ ಮುಷ್ಕರದಲ್ಲಿ ಐ. ಎನ್. ಟಿ. ಯು. ಸಿ. ಒಂದೆರಡು ಕೈಗಾರಿಕೆಗಳಲ್ಲಿ ಮಾತ್ರ ಭಾಗವಹಿಸಿದ್ದಿತು.

ಕಾರ್ಮಿಕರ ಸಂಯುಕ್ತ ಹೋರಾಟದ ಮೂಲಕವಲ್ಲದೆ ಅವರ ಬೇಡಿಕೆಗಳನ್ನು ಪಡೆಯಲು ಸಾಧ್ಯವಿಲ್ಲ ಎಂದು ನಂಬಿರುವ ಸಿ. ಐ. ಟಿ. ಯು. ತನ್ನ ಸ್ಥಾಪನೆಯ ನಂತರ ಈವರೆವಿಗೆ ನಮ್ಮ ದೇಶದಲ್ಲಿ, ವಿವಿಧ ರಾಜ್ಯಗಳಲ್ಲಿ, ವಿವಿಧ ಕೈಗಾರಿಕೆಗಳಲ್ಲಿ ನಡೆದಿರುವ ಎಲ್ಲಾ ಐಕ್ಯಹೋರಾಟಗಳಲ್ಲೂ ಸಹ ಪ್ರಮುಖ ಪಾತ್ರವನ್ನು ವಹಿಸಿದೆ. ಈ ಐಕ್ಯತೆಯನ್ನು ಬೆಸೆಯುವುದರಲ್ಲಿ ಸಿ. ಐ. ಟಿ. ಯು. ನಿರ್ಣಾಯಕ ಪಾತ್ರವನ್ನು ವಹಿಸಿದೆ.

"ಇಂದು ಭಾರತದ ಕಾರ್ಮಿಕ ಚಳುವಳಿಯಲ್ಲಿ ಸಿ. ಐ. ಟಿ. ಯು. ಪ್ರಧಾನ ಶಕ್ತಿಯಾಗಿದೆ. ಕಾರ್ಮಿಕರು ಇಂದು ತಮ್ಮ ಹಿತರಕ್ಷಣೆ ಮಾಡುವ ಮತ್ತು ಅತ್ಯಂತ ನಂಬಲರ್ಹವಾದ ಸಂಘಟನೆ ಸಿ. ಐ. ಟಿ. ಯು. ಎಂದು ಕಾಣುತ್ತಾರೆ. ಇದಕ್ಕೆ ಕಾರಣ ಯಾವುದೇ ಸರ್ಕಾರದ ಅಥವಾ ಯಾವುದೇ ಮಾಲೀಕನ ಕೃಪಾಕಟಾಕ್ಷವಲ್ಲ. ತನ್ನ ಸ್ಥಾಪನೆಯ ದಿನದಿಂದಲೇ ಸಿ. ಐ. ಟಿ. ಯು. ಅಚಲವಾಗಿ ಕಾರ್ಮಿಕ ವರ್ಗದ ಹಿತರಕ್ಷಣೆಗೆ ನಿಂತಿದೆ. ವರ್ಗಹೋರಾಟದ ಹಾದಿಯಲ್ಲಿ ದೃಢವಾಗಿ ಮುನ್ನಡೆದಿದೆ. "ಐಕ್ಯತೆ ಮತ್ತು ಐಕ್ಯಹೋರಾಟ" ಘೋಷಣೆಗೆ ಬದ್ಧವಾಗಿ ನಡೆದಿದೆ. ತೀವ್ರವಾದ ದಬ್ಬಾಳಿಕೆ ಮತ್ತು ತ್ಯಾಗಗಳ ಕಿಚ್ಚಿನಲ್ಲಿ ಬೆಳೆದಿದೆ ಸಿ. ಐ. ಟಿ. ಯು. ಈ ಕಾರಣಗಳಿಂದಾಗಿ ಸಿ. ಐ. ಟಿ. ಯು. ಗೆ ಇಂದಿರುವ ಸ್ಥಾನಮಾನಗಳು ಸಿಕ್ಕಿವೆ" ಎಂದು ಕಾಂ. ಪಿ. ರಾಮಮೂರ್ತಿ ಮದರಾಸ್ (4ನೆಯ) ಸಮ್ಮೇಳನದಲ್ಲಿ ಹೇಳಿದರು.

ಸಿ. ಐ. ಟಿ. ಯು. ಬೆಳವಣಿಗೆ ಮತ್ತು ದೇಶದ ಕಾರ್ಮಿಕರ ನಡುವೆ ಅದಕ್ಕೆ ಸಿಕ್ಕಿರುವ ಸ್ಥಾನ ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆಯಲಾರಂಭಿಸಿದೆ. ಐ. ಎಲ್. ಓ. ಕರೆಯುವ ಸಮಾವೇಶಗಳಿಗೆ, ಡಬ್ಲ್ಯು. ಎಫ್. ಟಿ. ಯು. ಸಮ್ಮೇಳನಕ್ಕೆ, ರುಮೇನಿಯ, ಬಲ್ಗೇರಿಯ, ಯುಗೋಸ್ಲಾವಿಯ ಮೊದಲಾದ ದೇಶಗಳಲ್ಲಿ ನಡೆದ ಸಮ್ಮೇಳನಗಳಿಗೆ ಸಿ. ಐ. ಟಿ. ಯು. ಗೆ ಆಮಂತ್ರಣಬಂದಿದ್ದು ಸಿ. ಐ. ಟಿ. ಯು. ಮುಖಂಡರು ಅವುಗಳಲ್ಲಿ ಭಾಗವಹಿಸಿದ್ದಾರೆ. ಮದರಾಸ್ ಸಮ್ಮೇಳನಕ್ಕೆ ಇತರ ದೇಶಗಳ ಕಾರ್ಮಿಕ ಸಂಘಟನೆಗಳಿಂದ ಮಾತ್ರವಲ್ಲದೆ ಸೋವಿಯತ್ ಒಕ್ಕೂಟ ಮತ್ತು ಚೀಣದ ಕಾರ್ಮಿಕ ಸಂಘಟನೆಗಳಿಂದಲೂ ಸಂದೇಶಗಳು ಬಂದಿದ್ದವು. ಈ ವರ್ಷದ ಸೋವಿಯತ್ ಒಕ್ಕೂಟದ ಮೇ ದಿನಾಚರಣೆಯಲ್ಲಿ ಭಾಗವಹಿಸಲು ಆಮಂತ್ರಣ

[ಕಡೆಯ ಪುಟ ನೋಡಿ]

ಆರ್ಥಿಕ ಸಮೀಕ್ಷೆ :

ಆರ್. ಚಂದ್ರ

ನೂರುದಿನಗಳ ಇಂದಿರಾ ಸರಕಾರದ ಸಾಧನೆಗಳೇನು?

ಮುಂಬರುವ 9 ರಾಜ್ಯ ವಿಧಾನಸಭೆಗಳಿಗೆ ನಡೆಯಲಿರುವ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಇಂದಿರಾ ಸರಕಾರ 100 ದಿನಗಳ ತನ್ನ ಅಧಿಕಾರಾವಧಿಯಾದ ಕೂಡಲೇ, ಏಪ್ರಿಲ್ 23ರಿಂದ ತನ್ನ ಮಹತ್ ಸಾಧನೆಗಳ ಕುರಿತು ಪತ್ರಿಕೆಗಳಲ್ಲಿ, ರೇಡಿಯೋ, ಟಿ. ವಿ., ಮುಂತಾದ ಸಮೂಹ ಮಾಧ್ಯಮಗಳಲ್ಲಿ ಬಿರುಸಿನ ಪ್ರಚಾರ ಪ್ರಾರಂಭಿಸಿದೆ. ಈ ಅವಧಿಯಲ್ಲಿ ದೇಶದ ಆರ್ಥಿಕ ವ್ಯವಸ್ಥೆಯು ಪುನರುಜ್ಜೀವನದ ಮಾರ್ಗ ಹಿಡಿದಿದೆಯಂತೆ, ಜನರ ನಿರಾಸೆಯನ್ನು ಹೋಗಲಾಡಿಸಿ ಅವರಲ್ಲಿ ಭರವಸೆಯನ್ನು ತುಂಬಲಾಗಿದೆಯಂತೆ, ಹಣದುಬ್ಬರ ತಡೆಯಲಾಗಿದೆಯಂತೆ, ಬೆಲೆಗಳು ಇಳಿಯುತ್ತಿವೆಯಂತೆ! ಆದರೆ, ಸರಕಾರದ ಹೇಳಿಕೆಗಳು ಅದರ ಅಧಿಕೃತ ಅಂಕಿಸಂಖ್ಯೆಗಳು ತಿಳಿಸುತ್ತಿರುವ ವಾಸ್ತವಿಕ ತತ್ವಕ್ಕೆ ತದ್ವಿರುದ್ಧವಾದಿವೆ!

ಹಣದುಬ್ಬರ ತಡೆಯಲಾಯಿತೆ ?

ಇಂದಿರಾ ಸರಕಾರದ ವಕ್ತಾರರು ಹೇಳುತ್ತಾರೆ. 1979ರ ಡಿಸೆಂಬರ್ ಅಂತ್ಯದಲ್ಲಿ ಹಣದುಬ್ಬರ ವಾರ್ಷಿಕ ದರವು ಶೇ. 22.2 ರಷ್ಟಾಗಿದ್ದು 1980ರ ಏಪ್ರಿಲ್ ಪ್ರಾರಂಭದಲ್ಲಿ ಹಣದುಬ್ಬರದ ವಾರ್ಷಿಕ ದರವು ಶೇ. 17.6ರಷ್ಟೇ ಆಗಿದೆ ಎಂದು. ಇದು ಸರಕಾರದ ಅಧಿಕೃತ ಅಂಕಿಸಂಖ್ಯೆಗಳಲ್ಲಿಯೇ ಡೊಂಬರಾಟವಾಡಿ ಜನರ ಕಣ್ಣಿಗೆ ಮಣ್ಣೆರಚುವ ಪ್ರಯತ್ನ ಅಷ್ಟೆ. ಹಣದುಬ್ಬರದ ಸಮಸ್ಯೆಯನ್ನು ಗಂಭೀರವಾಗಿ, ಕೂಲಂಕುಶವಾಗಿ ಪರಿಶೀಲಿಸಿದರೆ, ಸರಕಾರದ ವಕ್ತಾರರ ಹೇಳಿಕೆಗಳ ಪೊಳ್ಳುತನ ತಿಳಿಯುವುದು. ಕೆಳಗಿನ ಕೋಷ್ಟಕದಲ್ಲಿ ಇತ್ತೀಚೆಗಿನ ಸಗಟು ವ್ಯಾಪಾರದ ಬೆಲೆಸೂಚಿಯನ್ನು ಕೊಡಲಾಗಿದೆ.

ವಾರಾಂತ್ಯದಲ್ಲಿ	ಸಗಟು ವ್ಯಾಪಾರದ ಬೆಲೆಸೂಚಿ (1970-71= 100)
12-1-80	224 2
16-2-80	228.2
29-3-80	229.1
5-4-80	229 2
12-4-80	230.6
19-4-80	232.2
26-4-80	233 9
3-5-80	235.2
10-5-80	237.1

ಸಧ್ಯದ ಹಣದುಬ್ಬರವು ಚರಣಸಿಂಗರ ಫೆಬ್ರವರಿ 79ರ ಕೇಂದ್ರ ಮುಂಗಡಪತ್ರ ಪ್ರಕಟಗೊಂಡಂದಿನಿಂದ ಪ್ರಾರಂಭವಾಗಿದೆ. ಫೆಬ್ರವರಿ 79 ರಲ್ಲಿ ಸಗಟು ವ್ಯಾಪಾರದ ಬೆಲೆ ಸೂಚಿಯು 184 6ರಷ್ಟಿದ್ದು, ಮಾರ್ಚ್ 79ರಲ್ಲಿ 191 0ಕ್ಕೆ ನೆಗೆಯಿತು. ಮುಂದೆ ಸಪ್ಟೆಂಬರ್ 79 ರಷ್ಟರಲ್ಲಿ ಈ ಬೆಲೆಸೂಚಿಯು 220.9 ಕ್ಕೇರಿತು. ಆದರೆ, ನಂತರದ ನಾಲ್ಕು ತಿಂಗಳುಗಳಲ್ಲಿ ಅಂದರೆ, ಜನವರಿ 80ರಷ್ಟರಲ್ಲಿ 224ಕ್ಕೇ ನಿಂತಿತು.

ಜನವರಿ 79ರಿಂದ ಸೆಪ್ಟಂಬರ್ 79ರ ವರೆಗೆ ಹಣದುಬ್ಬರದ ದರದಲ್ಲಿ ಶೇ. 19ರಷ್ಟು ಹೆಚ್ಚಾಗಿದ್ದರೆ, ಸೆಪ್ಟಂಬರ್ 79ರಿಂದ ಜನವರಿ 80ರ ವರೆಗೆ ಶೇ. 1.4ರಷ್ಟೇ ಹಣದುಬ್ಬರದ ದರದಲ್ಲಿ ಹೆಚ್ಚಾಯಿತು. ಇದಕ್ಕೆ ಹೋಲಿಸಿ ನೋಡಿದಾಗ, ಇಂದಿರಾ ಸರಕಾರದ ಅವಧಿಯಲ್ಲಿ ಬೆಲೆಗಳು ಸ್ಥಿರವಾಗಿರುವ ಬದಲು, ಇಳಿಮುಖವಾಗುವ ಬದಲು, ಇನ್ನಷ್ಟು ವೇಗದಲ್ಲಿ ಹೆಚ್ಚುತ್ತಿರುವುದು ಕಂಡುಬರುತ್ತಿದೆ.

12-1-80ರ ವಾರಾಂತ್ಯದಲ್ಲಿ ಸಗಟು ವ್ಯಾಪಾರದ ಬೆಲೆಸೂಚಿಯು 224.2 ಇದ್ದದು ಮುಂದಿನ ನಾಲ್ಕು ತಿಂಗಳುಗಳಲ್ಲಿ 10-5-80ರ ವಾರಾಂತ್ಯದಲ್ಲಿ 237.1ಕ್ಕೆ ಏರಿತು. ಅಂದರೆ, 13 ಅಂಶಗಳಷ್ಟು, ಶೇ. 6ರಷ್ಟು ಏರಿತು. ಈ ಏರಿಕೆಯಲ್ಲಿ ಮೊದಲ ಒಂದು ತಿಂಗಳಲ್ಲಿ 4 ಅಂಶಗಳಷ್ಟೂ, ಮೊದಲ 2½ ತಿಂಗಳುಗಳಲ್ಲಿ 5 ಅಂಶಗಳಷ್ಟೂ, ಮೊದಲ 100 ದಿನಗಳಲ್ಲಿ 10 ಅಂಶಗಳಷ್ಟೂ, ಶೇ. 4.7ರಷ್ಟೂ ಹೆಚ್ಚಿರುವುದನ್ನು ಗಮನಿಸಬಹುದು. ಏಪ್ರಿಲ್ 5ರಿಂದ ಏಪ್ರಿಲ್ 26ರ ನಾಲ್ಕು ವಾರಗಳಲ್ಲಿ ಬೆಲೆಸೂಚಿಯಲ್ಲಿ 5 ಅಂಶಗಳಷ್ಟು ಏರಿರುವುದನ್ನೂ, ಮೇ ಮೊದಲ ವಾರದಲ್ಲಿಯೇ 2 ಅಂಶಗಳಷ್ಟು ಏರಿರುವುದನ್ನೂ ಮುಖ್ಯವಾಗಿ ಗಮನಿಸಬೇಕು. ಟೈಫಾಯ್ಡ್ ಜ್ವರದ ಕಾವು ಏರುತ್ತಿರುವಂತೆ, ದೇಶದ ರೋಗಗ್ರಸ್ತ ಆರ್ಥಿಕ ವ್ಯವಸ್ಥೆಯಲ್ಲಿ ಹಣದುಬ್ಬರದ ದರವು ತಡೆಯಿಲ್ಲದೆ ಏರುತ್ತಿದೆ. 12-1-79 ರಿಂದ 3-4-79ರ ಅವಧಿಯಲ್ಲಿ ಬೆಲೆ ಸೂಚಿಯು ಸರಾಸರಿ 183 ಆಗಿದ್ದು, 12-1-80ರಿಂದ 5-4-80ರ ಅವಧಿಯಲ್ಲಿ ಬೆಲೆಸೂಚಿಯು ಸರಾಸರಿ 226.9 ಆಗಿದ್ದು, ಶೇ. 24ರಷ್ಟು ಹೆಚ್ಚಿರುವುದನ್ನು ಇಂದಿರಾ ಸರಕಾರ ಮುಚ್ಚಿಡಲು ಪ್ರಯತ್ನಿಸುತ್ತಿದೆ.

ಬೃಹತ್ ಮುಂಬಯಿಗೆ ಸಂಬಂಧಿಸಿದ ಚಿಲ್ಲರೆ ಮಾರುಕಟ್ಟೆಯ ಬೆಲೆ ಸೂಚಿ (1970-71)ಯಲ್ಲಿಯೂ ಗಣನೀಯವಾಗಿ ಏರಿಕೆಯಾಗಿದೆ. ಜನವರಿ-ಮಾರ್ಚ್ 79ರಲ್ಲಿ ಇದರ ಸರಾಸರಿ 213.5 ಇದ್ದುದು, ಜನವರಿ-ಮಾರ್ಚ್ 80ರಲ್ಲಿ 263.7 ಕ್ಕೇರಿದ್ದೆ, ಅಂದರೆ ಶೇ. 23.5ರಷ್ಟು ಏರಿದೆ.

ಹಣದ ಚಲಾವಣೆ ಕಡಿಮೆಯಾಯಿತೆ ?

ದೇಶದಲ್ಲಿ 11-1-80ರಲ್ಲಿ ಒಟ್ಟು ಹಣದ ಚಲಾವಣೆಯು ರೂ. 24,324 ಕೋಟಿಗಳಾಗಿದ್ದು, 28-3-80ರಷ್ಟರಲ್ಲಿ ರೂ. 24172 ಕೋಟಿಗಿಳಿದಿದೆ ಎಂದೂ, ರೂ. 152 ಕೋಟಿಗಳಷ್ಟು ಹಣದ ಚಲಾವಣೆ ಕಡಿಮೆಯಾಗಿದೆ ಎಂದೂ, ಇದರಿಂದ ಹಣದುಬ್ಬರ ತಡೆಯಲು ಸಾಧ್ಯವಾಗುತ್ತಿದೆ ಎಂದೂ ಇಂದಿರಾ ಸರಕಾರ ಹೇಳಿಕೊಳ್ಳುತ್ತಿದೆ. ಆದರೆ, ಸರಕಾರಕ್ಕೆ ಬ್ಯಾಂಕುಗಳು ನೀಡುವ ಸಾಲದಲ್ಲಿಯೂ, ರಿಸರ್ವ್ ಬ್ಯಾಂಕ್ ನೀಡುವ ಸಾಲದಲ್ಲಿಯೂ, ಕೊರತೆ ಹಣಸೃಷ್ಟಿಯಲ್ಲಿಯೂ ಬ್ಯಾಂಕುಗಳು ವಾಣಿಜ್ಯ ಕ್ಷೇತ್ರಕ್ಕೆ ನೀಡುವ ಸಾಲದಲ್ಲಿಯೂ ಜನವರಿ 80ರಿಂದ ಮಾರ್ಚ್ 80ರ ಅವಧಿಯಲ್ಲಿ ಹಿಂದಿನ 9 ತಿಂಗಳ ಅವಧಿಗೆ ಹೋಲಿಸಿದಾಗ ಭಾರೀ ಪ್ರಮಾಣದಲ್ಲಿ ಹೆಚ್ಚಿರುವುದನ್ನು ಗಮನಿಸಬೇಕು. ಇಂದಿರಾ ಸರಕಾರ ಅಧಿಕಾರಕ್ಕೆ ಬರುವ ಮೊದಲ 9½ ತಿಂಗಳುಗಳಲ್ಲಿ ರೂ. 1112 ಕೋಟಿ ಕೊರತೆ ಹಣ ಸೃಷ್ಟಿಯಾಗಿದ್ದರೆ, ಮುಂದಿನ ಕೇವಲ 2½ ತಿಂಗಳುಗಳಲ್ಲಿ ರೂ. 1000 ಕೋಟಿ ಕೊರತೆ ಹಣ ಸೃಷ್ಟಿಮಾಡಲಾಗಿದೆ.(E&PW: 3-5-80) ವಾಣಿಜ್ಯ ಕ್ಷೇತ್ರಕ್ಕೆ ಬ್ಯಾಂಕುಗಳು ನೀಡುವಸಾಲಸೌಲಭ್ಯಗಳು ಹೆಚ್ಚುತ್ತಿವೆಯಲ್ಲದೆ, ಕಪ್ಪುಹಣವನ್ನೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬಚ್ಚಿಡಲಾಗುತ್ತಿದೆ ಎಂದು ಇತ್ತೀಚೆಗೆ ಪತ್ರಿಕೆಗಳು ವರದಿಮಾಡಿವೆ.

ಇದರಿಂದಾಗಿ ತಿಳಿದುಬರುವುದೇನೆಂದರೆ, ಸರಕಾರದ ಅನುತ್ಪಾದಿತ ವೆಚ್ಚಗಳು ಹೆಚ್ಚುತ್ತಿವೆ. ಕೃತಕ ಹಣ ಸೃಷ್ಟಿಯು ಹೆಚ್ಚುತ್ತಿದೆ. ಅಕ್ರಮ ಸಂಗ್ರಹಕಾರರಿಗೆ, ಕಳ್ಳಸಂತೆ ದಳ್ಳಾಳಿಗಳಿಗೆ, ಸಣ್ಣ ವ್ಯಾಪಾರಿಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದಸಾಲಸೌಲಭ್ಯಗಳು ಸಿಗುತ್ತಲೇ ಇವೆ. ಕಪ್ಪು ಹಣವನ್ನು ಜೋಪಾನವಾಗಿಡಲು ರಾಷ್ಟ್ರೀಕೃತ ಬ್ಯಾಂಕುಗಳೇ ಗೋದಾಮುಗಳಾಗುತ್ತಿವೆ ! ಹೀಗಾಗಿ ಇಂದಿರಾ ಸರಕಾರದ ಅಧಿಕಾರಾವಧಿಯಲ್ಲಿ ಹಣದುಬ್ಬರ ತಡೆಹಿಡಿಯಲಾಗದೆ, ಕೈಮೀರಿ ಏರುತ್ತಿದೆ. ವಿಧಾನಸಭೆಗಳ ಚುನಾವಣೆ ಸಮೀಪಿಸುತ್ತಿರುವುದರಿಂದ, ಚುನಾವಣೆಗೆ ಅಪಾರ ಹಣ ಒದಗಿಸುವ ಬಂಡವಾಳಶಾಹಿ-ಭೂಮಾಲಕ ವರ್ಗಕ್ಕೆ ಮತ್ತು ವ್ಯಾಪಾರಿಗಳಿಗೆ ಅನಾನುಕೂಲವಾಗುವ ಯಾವ ಕ್ರಮಗಳನ್ನು ಸರಕಾರವು ಕೈಕೊಳ್ಳಲಾರದು. ಇದು ಸ್ಪಷ್ಟ.

ಜೀವನಾವಶ್ಯಕ ವಸ್ತುಗಳ ಬೆಲೆಗಳು ಇಳಿದಿವೆಯೇ?

ಜೀವನಾವಶ್ಯಕ ವಸ್ತುಗಳ ಸಗಟು ವ್ಯಾಪಾರದ ಬೆಲೆ ಸೂಚಿ (1970-71 = 100)ಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

ಪ್ರತಿಯೊಂದು ಜೀವನಾವಶ್ಯಕ ವಸ್ತುಗಳ ಬೆಲೆಗಳೂ ಏರುತ್ತಿವೆ ಅಕ್ಕಿ

ಅವಶ್ಯಕ ವಸ್ತುಗಳು	ಬೆಲೆ ಸೂಚಿ 12-1-80	5-4-80
ಅಕ್ಕಿ	188.4	190.5
ಬಾಜ್ರ	188.5	199.0
ಸಕ್ಕರೆ, ಖಂಡಸಾರಿ, ಬೆಲ್ಲ,	248.5	283.2
ಹತ್ತಿಬಟ್ಟೆ	200.0	206 0
ಕಾಗದ	250.5	252 4
ವನಸ್ಪತಿ	197.1	205.8
ನೆಲಕಡಲೆ ಎಣ್ಣೆ	190.6	202.0
ರಾಸಾಯನಿಕ ವಸ್ತುಗಳು ಮತ್ತು ಉತ್ಪಾದನೆಗಳು	207.2	212 0
ಚರ್ಮ ಮತ್ತು ಚರ್ಮದಿಂದ ಉತ್ಪಾದಿತ ವಸ್ತುಗಳು	351.1	359.0
ರಬ್ಬರ್ ಮತ್ತು ರಬ್ಬರ್‌ನಿಂದ ಉತ್ಪಾದಿತ ವಸ್ತುಗಳು	226.0	230,9

(ಸಾಧಾರ : E&PW. 3-5-80)

ಬಾಜ್ರ ಮುಂತಾದ ಆಹಾರ ಧಾನ್ಯಗಳ ಬೆಲೆಗಳೂ ಏರುತ್ತಿವೆ. ಬಡ ಕಾರ್ಮಿಕರ ಕೂಲಿಯ ಶೇ. 90ರಷ್ಟು ಆಹಾರಧಾನ್ಯಗಳಿಗೇ ಖರ್ಚಾಗುವುದರಿಂದ, ಆಹಾರ ಧಾನ್ಯಗಳ ಬೆಲೆ ಏರಿಕೆಯಿಂದಾಗಿ ಜನಸಾಮಾನ್ಯರೂ ಬಡ ಕಾರ್ಮಿಕರೂ ತಮ್ಮ ಗ್ರಾಹಕ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಆಹಾರಧಾನ್ಯಗಳೂ ಅವರಿಗೆ ಎಟಕದಂತಾಗುತ್ತಿವೆ. ಸಕ್ಕರೆ, ವನಸ್ಪತಿ, ಅಡಿಗೆತೈಲ ಮುಂತಾದವುಗಳ ಬೆಲೆಗಳೂ ವಿಪರೀತ ಏರುತ್ತಿದ್ದು ಮಧ್ಯಮ ವರ್ಗದವರ ಗ್ರಾಹಕ ಶಕ್ತಿಯು ಕುಸಿಯುತ್ತಿದೆ ಜೀವನಾವಶ್ಯಕ ವಸ್ತುಗಳೂ, ಜೀವ ಉಳಿಸುವ ಅತ್ಯಂತ ಪ್ರಾಮುಖ್ಯವಾದ ಔಷಧಿ ಸಾಮಗ್ರಿಗಳು ಮಾರುಕಟ್ಟೆಯಿಂದ ಮಾಯವಾಗುತ್ತಿವೆ. ಇವುಗಳ ತೂಕ, ಗುಣಮಟ್ಟಗಳಲ್ಲಿ ಗ್ರಾಹಕರಿಗೆ ಸೇರುವಷ್ಟರಲ್ಲಿ ಮೋಸ, ಕಲಬೆರಕೆಗಳಾಗುತ್ತಿವೆ. ಬೆಲೆಏರಿಕೆಯಿಂದ ಜನಜೀವನ ಅಸಹನೀಯವಾಗುತ್ತಿದೆ.

ಸಕ್ಕರೆ ಮತ್ತು ಅಡಿಗೆತೈಲಗಳ ಆಮದು, ಹೆಚ್ಚಿನ ಗಾತ್ರದಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿರುವುದು, ಇತ್ಯಾದಿ ಕ್ರಮಗಳು ಬೆಲೆಏರಿಕೆಯ ಮೇಲೆ ಪರಿಣಾಮ ಬೀರಲೇ ಇಲ್ಲ. ಕಾರಣ, ಸಕ್ಕರೆಯು ಒಟ್ಟು ದಾಸ್ತಾನು ಈ ವರ್ಷ ಕಡಿಮೆ ಇರುವುದರಿಂದ ಸಕ್ಕರೆ ಕಾರ್ಖಾನೆಗಳ ಮಾಲಕರು, ವ್ಯಾಪಾರಿಗಳು ಸಕ್ಕರೆಯನ್ನು ಅಕ್ರಮವಾಗಿ ದಾಸ್ತಾನುಮಾಡುತ್ತಿರುವರು. ಚುನಾವಣೆಯ ವೇಳೆ ಒಂದು ತಿಂಗಳಷ್ಟೇ ಸರಕಾರ ಸಕ್ಕರೆ ಆಮದು ಮಾಡುವುದು, ಹೆಚ್ಚು ಗಾತ್ರದಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡುವುದು ಸಾಧ್ಯ. ಮುಂದೆ ಕೊರತೆ ಪರಿಸ್ಥಿತಿಯು ಸಂಭವವಿರುವುದರಿಂದ ಬೆಲೆಗಳು ಇಳಿಮುಖವಾಗುತ್ತಿಲ್ಲ. ಸಾರ್ವಜನಿಕ ವಿತರಣಾ ವ್ಯವಸ್ಥೆಯು ದೇಶದ ಒಟ್ಟು ಗ್ರಾಹಕರ ಕೇವಲ ಶೇಕಡಾ 30ರಷ್ಟು ಮಾತ್ರವಿರುವುದರಿಂದ ಬೆಲೆಗಳ ಮೇಲೆ ಈ ವ್ಯವಸ್ಥೆಯು ಪರಿಣಾಮ ಬೀರಲು ವಿಫಲವಾಗಿದೆ.

ಬರೇ ಡೊಂಬರಾಟದಿಂದ ಪ್ರಯೋಜನವಿಲ್ಲ :

ಆರ್ಥಿಕ ಪುನರುಜ್ಜೀವನ, ಹಣದುಬ್ಬರ ಮತ್ತು ಬೆಲೆಏರಿಕೆಗಳ ನಿಯಂತ್ರಣ, ಇತ್ಯಾದಿಗಳು ಘೋಷಣೆಗಳಿಂದ ಸಾಧ್ಯವಿಲ್ಲ; ಅರೆಮನಸ್ಸಿನ ಒಂದೆರಡು ಸಣ್ಣಪುಟ್ಟ ಕ್ರಮಗಳಿಂದ ಸಾಧ್ಯವಿಲ್ಲ; ಅಕ್ರಮ ಸಂಗ್ರಹಗಾರರಿಗೆ, ಕಾಳಸಂತೆ ಕದೀಮರಿಗೆ, ಕಪ್ಪುಹಣಗಾರರಿಗೆ, ಲಾಭಬಡುಕರಿಗೆ ಪೊಳ್ಳು ಬೆದರಿಕೆ ನೀಡುವುದರಿಂದ ಸಾಧ್ಯವಿಲ್ಲ. ಸರಕಾರ ಈ ವಿಷಯಗಳಲ್ಲಿ ನಿಜವಾಗಿ ಪರಿಣಾಮಕಾರಿಯಾಗಿ ಕ್ರಮಕೈಕೊಳ್ಳುವುದಾದರೆ, 1. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಬೇಕು. 2. ಕೆಲವು ಜೀವನಾವಶ್ಯಕ ವಸ್ತುಗಳ ವಿತರಣೆ ಮತ್ತು ಉತ್ಪಾದನೆಯನ್ನು ಸರಕಾರವೇ ಸಂಪೂರ್ಣವಾಗಿ ವಹಿಸಬೇಕು. 3. ಕೃತಕ ಹಣ ಸೃಷ್ಟಿ ಮಾಡುವುದನ್ನು ನಿಲ್ಲಿಸಬೇಕು. 4. ಜೀವನಾವಶ್ಯಕ ವಸ್ತುಗಳ ಮೇಲಿನ ಅಪ್ರತ್ಯಕ್ಷ ತೆರಿಗೆಗಳನ್ನು ತೆಗೆದು ಹಾಕಬೇಕು ಅಥವಾ ಕಡಿಮೆಮಾಡಬೇಕು. ಇಂತಹ ಕ್ರಮಗಳನ್ನು ಕೈಕೊಳ್ಳಲು ಬಂಡವಾಳಶಾಹಿ-ಭೂಮಾಲಕ ಪ್ರತಿನಿಧಿಯಾಗಿರುವ ಇಂದಿರಾ ಸರಕಾರಕ್ಕೆ ನೈತಿಕ ಸ್ಥೈರ್ಯ ಇದೆಯೆ ?

○

ರಕ್ಷಣೆಯ ಮಂತ್ರ

ಅಲ್ಪಸಂಖ್ಯಾತರಾ ರಕ್ಷಣೆಯ ಮಂತ್ರ
ಜಪಿಸುತ್ತ ಹಿಡಿದಿಹರು ಆಡಳಿತ ಸೂತ್ರ
ದಿನದಿನವು ದೌರ್ಜನ್ಯ ನಡೆಯುತ್ತ
ಲಿಹುದು
ಸಂಘಟಿತ ಹೋರಾಟ ದಾರಿ
ತೆರೆದಿಹುದು

—ಕೃಷ್ಣ ಮೂರ್ತಿ

ಕೆಳಹಂತದಿಂದ ಯೋಜನೆ ಎಂದರೇನು?

ಇ. ಎಂ. ಎಸ್. ನಂಬೂದಿರಿಪಾದ್

[ಹಿಂದಿನ ಸಂಚಿಕೆಯಿಂದ ಮುಂದು ವರಿದುದು]

"ಕೇಂದ್ರ-ರಾಜ್ಯಗಳ ಹಣಕಾಸು ಸಂಬಂಧಗಳ ಬದಲಾವಣೆಗಾಗಿ ಪ. ಬಂಗಾಳ ಮುಂದಿಟ್ಟ ಬೇಡಿಕೆಯನ್ನು ಯೋಜನಾ ಆಯೋಗ ತಿರಸ್ಕರಿಸಿದೆ" ಎಂದು ಕಲ್ಕತ್ತದ ಬಿಸಿನೆಸ್ ಸ್ಟಾಂಡರ್ಡ್ ವರದಿ ಮಾಡಿದೆ. (ಏಪ್ರಿಲ್ 30)

ಕೇಂದ್ರವು ವಸೂಲುಮಾಡುವ ಕಂದಾಯದ ಶೇಕಡಾ 75 ಭಾಗವು ರಾಜ್ಯಗಳಿಗೆ ಹಂಚಿಕೆಯಾಗಬೇಕು ಎಂಬುದೇ ಪ. ಬಂಗಾಳ ಸರ್ಕಾರದ ಬೇಡಿಕೆಯಾಗಿತ್ತು. "ಕೇಂದ್ರದ ಮತ್ತು ರಾಜ್ಯಗಳ ಅಗತ್ಯಗಳನ್ನು, ಕೇಂದ್ರ ಸರ್ಕಾರವು ವಸೂಲುಮಾಡುವ ಹಣಕಾಸನ್ನು ಸಮಾನವಾಗಿ ಮತ್ತು ಸಮರ್ಥವಾಗಿ ಹಂಚುವುದರಿಂದ ಪೂರೈಸಬಹುದು. ಕೇಂದ್ರ ಮತ್ತು ರಾಜ್ಯಗಳ ನಡುವೆ ತೆರಿಗೆ ವಸೂಲಿಯ ಅಧಿಕಾರಗಳನ್ನು ವಿತರಣೆಮಾಡುವುದರಲ್ಲಿ ಬದಲಾವಣೆಬೇಕಾಗಿಲ್ಲ"ಎಂಬುದು ಆಯೋಗದ ವಾದ.

ಬೇರೆ ಮಾತುಗಳಲ್ಲಿ ಹೇಳುವುದಾದರೆ, ಆಯೋಗ ಹೇಳುವಹಾಗೆ "ಕೇಂದ್ರ ಸರ್ಕಾರದ ಅನೇಕ ಯೋಜನೆಗಳಲ್ಲಿ ರಾಜ್ಯಗಳು ಇನ್ನಷ್ಟು ಕೇಂದ್ರದ ನೆರವನ್ನು ಪಡೆಯುತ್ತವೆ" ಎನ್ನುವ ಈ ಸದ್ಯದ ವ್ಯವಸ್ಥೆಯಿಂದಲೇ ಆಯೋಗವು ಪೂರ್ಣವಾಗಿ ತೃಪ್ತಿ ಹೊಂದಿದೆ.

ತೀರ್ಮಾನಗಳು ಖಚಿತ :

ಬಿಸಿನೆಸ್ ಸ್ಟಾಂಡರ್ಡ್ ಪತ್ರಿಕೆಯಲ್ಲಿ ಈ ವೇಲಿನ ವರದಿ ಬಂದ ದಿನವೇ, ಹಿಂದೂಸ್ತಾನ್ ಟೈಮ್ಸ್‌ನಲ್ಲಿ "ಫಲಿತಾಂಶಗಳಿಗಾದಿ ಯೋಜನೆ" ಎಂಬ ಶೀರ್ಷಿಕೆಯ ಒಂದು ಲೇಖನ ಬಂದಿತ್ತು. ಯೋಜನಾಪ್ರಕ್ರಿಯೆ ಆರಂಭವಾದಾಗಿನಿಂದಲೂ ಯೋಜನೆಯ ವೈಫಲ್ಯವನ್ನು ಕುರಿತು ಪೀಪಲ್ಸ್ ಡೆಮಾಕ್ರಸಿ ಮತ್ತಿತರ ಎಡಪತ್ರಿಕೆಗಳು ಹೇಳಿತ ತೀರ್ಮಾನಗಳನ್ನೇ ಇದು ಖಚಿತಗೊಳಿಸುವಂತಿತ್ತು. ಇದರ ಲೇಖಕರು ಹೀಗೆ ಹೇಳಿದ್ದಾರೆ :

"ಪ್ರತಿಯೊಂದು ಯೋಜನೆಯಲ್ಲೂ ಸಾಮಾನ್ಯವಾದ ಲಕ್ಷಣ ಕಂಡು ಬಂದಿತು : ಅದು ವಿಫಲವಾಯಿತು... ಎರಡನೇ ಯೋಜನೆಯಿಂದಾರಂಭಿಸಿ, ಯೋಜನಾ ಆಯೋಗವು ತುಂಬ ಮುಂದುವರಿದ ಮಾದರಿಗಳನ್ನು ಇಟ್ಟುಕೊಳ್ಳುತ್ತಿತ್ತು. ಪ್ರತಿಯೋಜನೆಯೂ ಅದರ ಉದ್ದೇಶಿತ ಗುರಿಗಿಂತ ತುಂಬ ಹಿಂದು ಬೀಳುತ್ತಿತ್ತು". ಆದ್ದರಿಂದ, ಪಶ್ಚಿಮ ಬಂಗಾಳದ ಅಥವಾ ಇತರರ ಸಲಹೆಗಳನ್ನು ತಿರಸ್ಕರಿಸುವುದಕ್ಕೆ ಮುಂಚೆ ಯೋಜನಾ ಆಯೋಗವು ತನ್ನನ್ನು ತಾನು ವಿಮರ್ಶೆ ಮಾಡಿಕೊಂಡು, ಯೋಜನಾ ಪ್ರಕ್ರಿಯೆಯಲ್ಲಿ ಏನಾದರೂ ಕೊರತೆಗಳಿವೆಯೇ, ಇದ್ದರೆ ಯಾಕೆ ಇವೆ ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸುವುದು ಬುದ್ಧಿವಂತಿಕೆಯಾಗುತ್ತಿರಲಿಲ್ಲವೆ ?

ಯೋಜನಾ ಪ್ರಕ್ರಿಯೆಯ ಬಗ್ಗೆ ವಿವಿಧ ದೃಷ್ಟಿಕೋನಗಳಿಂದ ಮಾಡಿರುವ ವಿಮರ್ಶೆಗಳು ಆ ಪ್ರಕ್ರಿಯೆಯಷ್ಟೇ ಹಳೆಯವು ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಈಗ ಹೊಸದೊಂದು ಅಧ್ಯಾಯ ಶುರುವಾಗುತ್ತಿರುವ ಸಂದರ್ಭದಲ್ಲಿ, ಅನುಭವದ ಬೆಳಕಿನಲ್ಲಿ ಮತ್ತು ಪ್ರಕ್ರಿಯೆಯ ಸಾಫಲ್ಯದ ಬಗ್ಗೆ ಆಸಕ್ತಿ ಇರುವವರ ಸಲಹೆಗಳ ಬೆಳಕಿನಲ್ಲಿ ಇದುವರೆಗೆ ಆಗಿರುವುದನ್ನು ಪ್ರಾಮಾಣಿಕವಾಗಿ ಪರಿಶೀಲಿಸುವುದಕ್ಕೆ ಆಯೋಗಕ್ಕೆ ಇದು ತಕ್ಕ ಸಮಯವಲ್ಲವೇ ?

ವಾಮಪಕ್ಷಗಳ ವಿಮರ್ಶೆ :

ಯೋಜನಾ ಪ್ರಕ್ರಿಯೆಯ ಬಗ್ಗೆ ಬಂದ ವಿಮರ್ಶೆಯಲ್ಲಿ ವಾಮಪಕ್ಷಗಳ ದೃಷ್ಟಿಕೋನವು ಬೇರೆಯಾಗಿದ್ದು, ಯೋಜನೆಗಳ ರಚನೆಯ ಆಧಾರವಾದ ಸಾಮಾಜಿಕ-ಆರ್ಥಿಕ ನೀತಿಗಳ ಮೇಲೆ ಇದು ಕೇಂದ್ರೀಕೃತವಾಗಿದೆ. ಇಲ್ಲಿ ಆ ವಿಮರ್ಶೆಯ ದಾರಿಯನ್ನು ಹೊಸದಾಗಿ ವಿವರಿಸುವ ಅಗತ್ಯವಿಲ್ಲ. ಒಂದು ಮಾತಿನಲ್ಲಿ ಹೇಳುವುದಾದರೆ, ಯೋಜನೆಯ ವೈಫಲ್ಯಕ್ಕೆ ಮೂಲ ಕಾರಣ, ತಮ್ಮ ಕೈಗಳಲ್ಲಿ ಅಪಾರ ಸಂಪತ್ತನ್ನು ಶೇಖರಿಸಿಕೊಂಡಿರುವವರ ಸಂಪನ್ಮೂಲಗಳನ್ನು ಬಳಸಿ ಮತ್ತು ಶ್ರಮಜೀವಿ ಜನತೆಯ ದುಡಿಮೆ ಶಕ್ತಿಯನ್ನು ಉಪಯೋಗಿಸುವುದರ ಬದಲು, ಯೋಜನಾತಜ್ಞರು ಈಗಾಗಲೇ ಶ್ರೀಮಂತರಾಗಿರುವವರನ್ನು ಮತ್ತಷ್ಟು ಶ್ರೀಮಂತರನ್ನಾಗಿಸುವ ಮತ್ತು ಬಹುಸಂಖ್ಯಾತ ಬಡವರನ್ನು ಮತ್ತಷ್ಟು ಬಡವರನ್ನಾಗಿಸುವ ಯೋಜನಾನೀತಿಗಳನ್ನು ಅನುಸರಿಸುತ್ತಿರುವುದೇ ಆಗಿದೆ.

ಇದರಿಂದ ತತ್‌ಕ್ಷಣಕ್ಕೆ ಏಳುವ ಪ್ರಶ್ನೆ ಎಂದರೆ ಕೇಂದ್ರ ಮತ್ತು ರಾಜ್ಯಗಳು, ರಾಜ್ಯಗಳು ಮತ್ತು ಜಿಲ್ಲೆಗಳು, ಸ್ಥಳೀಯ ಸಂಸ್ಥೆಗಳ, ಅಲ್ಲಿಂದ ಪಂಚಾಯತುಗಳ ಮೂಲಕ ಯೋಜನಾ ಪ್ರಕ್ರಿಯೆಯಲ್ಲಿ ಜನತೆಯು ಭಾಗವಹಿಸುವಂತೆ ಮಾಡುವುದು ಮತ್ತು ನೀತಿಗಳ ರಚನೆ ಮತ್ತು ಅನ್ವಯದಲ್ಲಿ ಅವರು ಪಾಲ್ಗೊಳ್ಳುವಂತೆ ಮಾಡುವುದು, ಇದನ್ನು ನಿಯಮದಲ್ಲಿ ಒಪ್ಪಿಕೊಳ್ಳಲಾಗಿದ್ದರೂ ಆಚರಣೆಯಲ್ಲಿ ಅಲಕ್ಷಿಸಲಾಗಿದೆ. ಇದರ ಮುಖ್ಯ ಜವಾಬ್ದಾರಿಯನ್ನು, ಯೋಜನಾ ಆಯೋಗದ ಸಹಾಯ ಪಡೆದು ಕೇಂದ್ರ ಸರ್ಕಾರ ವಹಿಸಿಕೊಳ್ಳಬೇಕು. ಆದರೆ ಅದೇ ರೀತಿ ಮುಂದೆಯೂ ಮುಂದುವರೆಯುತ್ತದೆಂಬುದು ಯೋಜನಾ ಆಯೋಗದ ಈ ಮೇಲಿನ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ

ಎಲ್ಲ ಹಂತಗಳ ಯೋಜನಾ ಚಟುವಟಿಕೆಗಳು ಅಖಿಲಭಾರತ ಕೇಂದ್ರವೊಂದರಲ್ಲಿ ಸಮನ್ವಯಗೊಳ್ಳದಿದ್ದರೆ ಭಾರತದಲ್ಲಿ ನಿಜವಾದ ಯೋಜನೆ ಸಾಧ್ಯವಿಲ್ಲ ಎಂಬುದನ್ನು ನಾವು ಪೂರ್ಣವಾಗಿ ಒಪ್ಪುತ್ತೇವೆ. ಪಂಚಾಯತುಗಳ ಯೋಜನಾ ಚಟುವಟಿಕೆಗಳನ್ನು ಬ್ಲಾಕ್ ಅಥವಾ ತಾಲ್ಲೂಕು ಮಟ್ಟದಲ್ಲಿ ಸಂಘಟಿಸಬೇಕು. ಬ್ಲಾಕು ಅಥವಾ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಯೋಜನಾ ಅಧಿಕಾರವು ಸಂಘಟಿಸಬೇಕು. ಜಿಲ್ಲೆಗಳನ್ನು ರಾಜ್ಯ ಮತ್ತು ರಾಜ್ಯಗಳನ್ನು ಅಖಿಲಭಾರತ ಅಧಿಕಾರ ಸಂಘಟಿಸಬೇಕು. ದೇಶದ ಎಲ್ಲ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ತುಂಬ ಲಾಭದಾಯಕವಾಗಿ ಉಪಯೋಗಿಸಿಕೊಳ್ಳಬೇಕಾದರೆ ಇದನ್ನು ಅತ್ಯಗತ್ಯವಾಗಿ ಮಾಡಬೇಕು. ವಿಕೇಂದ್ರೀಕರಣವೆಂದರೆ ಸಮನ್ವಯವನ್ನು ದುರ್ಬಲಗೊಳಿಸುವುದು (ಕೈಬಿಡುವುದರ ಮಾತಿರಲಿ) ಎಂದರ್ಥವಲ್ಲ.

ಮೂರುದಶಕಗಳ ಅಭ್ಯಾಸ :

ಆದರೆ ದುರಾದೃಷ್ಟದಿಂದ ನಮ್ಮ ದೇಶದಲ್ಲಿ ಅನುಸರಿಸಲಾಗಿರುವ ಮೂರು ದಶಕಗಳ ಈ ಯೋಜನೆಯಲ್ಲಿ ಇಂಥ ಸಮನ್ವಯವಿಲ್ಲ ಅದು ಒಂದು ಅಧಿಕಾರಶಾಹಿ ವ್ಯವಸ್ಥೆಯಾಗಿ ಮಾರ್ಪಟ್ಟಿದೆ; ಯೋಜನೆಯ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುವ ಅಧಿಕಾರವು ಕೇಂದ್ರದಲ್ಲಿ ಇದೆ; ಯೋಜನೆಯ ಕೆಳಹಂತಗಳೆಲ್ಲವೂ, ಅಖಿಲಭಾರತ ಕೇಂದ್ರವು ತೆಗೆದುಕೊಂಡ ನಿರ್ಣಯಗಳನ್ನು ಜಾರಿಗೊಳಿಸುವ ಬರಿಯ ಸಾಧನಗಳಾಗಿ ಉಳಿದಿವೆ. ಈ ಪ್ರವೃತ್ತಿಯು ಬದಲಾಗಬೇಕೆಂದು ನಾವು ಸಲಹೆ ಮಾಡಿದ್ದೇವೆ.

ಎರಡನೇ ಪಂಚವಾರ್ಷಿಕ ಯೋಜನೆಯು ರಚಿತವಾದಂದಿನಿಂದಲೂ, ರಾಜ್ಯದ ಯೋಜನೆಗಳು ಯಾವ ರೀತಿ ಇರಬೇಕೆಂಬ ನಿಯಮಗಳನ್ನು ಯೋಜನಾ ಆಯೋಗ ನೀಡುತ್ತ ಬಂದಿದೆ. ಬಂಡವಾಳ ಹೂಡಿಕೆ, ಉತ್ಪಾದನೆ, ಉದ್ಯೋಗ, ತೆರಿಗೆ ಈ ಎಲ್ಲ ಗುರಿಗಳೂ ಕೇಂದ್ರದಿಂದ ನಿಗದಿ ಮಾಡಲ್ಪಟ್ಟು, ರಾಜ್ಯಗಳು ಇವನ್ನು ಖಚಿತಗೊಳಿಸುವಂತೆ ಕೇಳಲಾಗುತ್ತದೆ. ರಾಜ್ಯಗಳು ಇದಕ್ಕೆ ವಿಧೇಯವಾಗಿರದೆ ಬೇರೆ ದಾರಿ ಇಲ್ಲ. ಏಕೆಂದರೆ ಹಣಕಾಸು ಸಂಪನ್ಮೂಲಗಳೆಲ್ಲ ಕೇಂದ್ರದ ಕೈಯಲ್ಲೇ ಇವೆ. ಹೀಗಾಗಿ ಗುರಿಗಳನ್ನು ನಿಗದಿಪಡಿಸುವ ಪ್ರಮಾಣವನ್ನು ಕೇಂದ್ರವೇ ಕೊಡುತ್ತದೆ. ತಮ್ಮ ಅಗತ್ಯಗಳಿಗೆ ತಕ್ಕಂತೆ ಚಿಲ್ಲರೆ ಬದಲಾವಣೆ ಮಾಡಿಕೊಳ್ಳುವ ಸ್ವಾತಂತ್ರ್ಯ ಮಾತ್ರ ರಾಜ್ಯಗಳಿಗೆ ಉಳಿದಿರುತ್ತದೆ.

ತೀವ್ರ ದೌರ್ಬಲ್ಯ :

ಯೋಜನಾ ವ್ಯವಸ್ಥೆಯ ತೀವ್ರ ದೌರ್ಬಲ್ಯವೆಂದರೆ, ಲೆಕ್ಕಚಾರಗಳು ಅಥವಾ ನೀತಿಗಳ ರಚನೆ ಇವ್ಯಾವುವೂ ರಾಜ್ಯಮಟ್ಟದಲ್ಲಿ ನಡೆಯದೆ ಇರುವುದು. ರಾಜ್ಯಗಳ ವಿಶೇಷ ಅಗತ್ಯಗಳು, ಸಂಪನ್ಮೂಲಗಳು ಮತ್ತು ಅವುಗಳ ಪರಿಸ್ಥಿತಿಗಳಿಗೆ ತಕ್ಕಂತೆ ನೀತಿಗಳ ಅನ್ವಯ, ಇವುಗಳನ್ನು ಪರಿಶೀಲಿಸುವುದೇ ಇಲ್ಲ.

ಒಂದು ರಾಜ್ಯಕ್ಕೆ ಇದೆಷ್ಟು ಮಾರಕವಾಗಬಹುದೆಂಬುದನ್ನು, ಕೇರಳಕ್ಕೆ ಸಂಬಂಧಿಸಿದ ಹಾಗೆ ತಿರುವನಂತಪುರದ ಅಭಿವೃದ್ಧಿ ಅಧ್ಯಯನ ಕೇಂದ್ರದ ಡಾ॥ ಕೆ. ಎನ್. ರಾಜ್ ಮತ್ತು ಅವರ ಸಹೋದ್ಯೋಗಿಗಳು ತೋರಿಸಿಕೊಟ್ಟಿದ್ದಾರೆ. ಅವರ ಎಲ್ಲ ತೀರ್ಮಾನಗಳನ್ನು ಒಪ್ಪಿಕೊಳ್ಳಲಾಗದಿದ್ದರೂ, ಡಾ॥ ರಾಜ್ ಅವರ ನೇತೃತ್ವದಲ್ಲಿ ಆರ್ಥಿಕತಜ್ಞರು, "ಕೇರಳದ ಕೃಷಿಯ ದುರ್ಬಲ ದಾಖಲೆ"ಯ ಬಗ್ಗೆ ಗಮನ ಸೆಳೆದಿದ್ದಾರೆ. "ರಾಜ್ಯದಲ್ಲಿ ಹೈಡ್ರೋ ವಿದ್ಯುಚ್ಛಕ್ತಿಗೆ ಅಗಾಧ ಬಂಡವಾಳ ಹೂಡಿದ್ದರೂ ಆರ್ಥಿಕ ಬೆಳವಣಿಗೆ ಯಾವ ಗಮನಾರ್ಹ ಮಟ್ಟದಲ್ಲೂ ಆಗಿಲ್ಲ". "ವಿದ್ಯುಚ್ಛಕ್ತಿ ವಿಚಾರದಲ್ಲಿ ಗಮನವನ್ನು ಬದಲಾಗಿಸಬೇಕಾಗಿದೆ" ಎಂದು ಹೇಳಿದ್ದಾರೆ. ಹಿಂದೆಯೇ ಸರಿಯಾದ ಅಧ್ಯಯನ ನಡೆಸಿದ್ದಿದ್ದರೆ, ಕೇರಳಕ್ಕೆ ಪಂಚವಾರ್ಷಿಕ ಯೋಜನೆಗಳು ಈಗಿರುವುದಕ್ಕಿಂತ ಬೇರೆ ರೀತಿ ಇರುತ್ತಿದ್ದವು.

ಇದು ಕೇರಳದ ಹಾಗೇ ಎಲ್ಲ ರಾಜ್ಯಗಳಲ್ಲೂ ನಿಜವಿರಬಹುದು. ಆದರೆ ಕೇರಳದಲ್ಲಿ ಮತ್ತು ಇನ್ನಿತರ ರಾಜ್ಯಗಳಲ್ಲಿ (ಎಲ್ಲ ರಾಜ್ಯಗಳಲ್ಲಿ ಅಲ್ಲ) ಅಂಥ ಪ್ರಯತ್ನಗಳು ನಡೆದು, ಪ್ರತಿರಾಜ್ಯವೂ ತನ್ನ ಅಭಿವೃದ್ಧಿಗಾಗಿ ತನ್ನ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಪೂರ್ಣಬಳಕೆಗಾಗಿ ವಿಶಿಷ್ಟ ಯೋಜನೆಗಳನ್ನು ರೂಪಿಸಿಕೊಂಡರೆ, ಎಲ್ಲ ನಿರ್ಣಯರಚನೆಯ ಅಧಿಕಾರವನ್ನೂ ತನ್ನಲ್ಲೇ ಕೇಂದ್ರೀಕರಿಸಿಕೊಂಡಿರುವ ಸದ್ಯದ ವ್ಯವಸ್ಥೆ ಅದಕ್ಕೆ ಅನುಮತಿ ಕೊಡುವುದೆ? ತನ್ನ ಅಗತ್ಯಗಳು ಮತ್ತು ಸಾಧ್ಯತೆಗಳಿಗೆ ತಕ್ಕಂತೆ ರಾಜ್ಯಗಳು ಯೋಜನೆಗಳನ್ನು ತಯಾರಿಸಿಕೊಂಡರೆ ಅದನ್ನು ಕೇಂದ್ರದ ಯೋಜನಾತಜ್ಞರು ತಿರಸ್ಕರಿಸಿ, ಪ್ರತಿರಾಜ್ಯವೂ ಕೇಂದ್ರವು ಹಾಕಿದ ದಾರಿಯಲ್ಲಿ ನಡೆಯಬೇಕೆಂದು ಆದೇಶಿಸುವುದಿಲ್ಲವೆ? ಹಿಂದಿನ ಎಲ್ಲ ಯೋಜನೆಗಳ ಅನುಭವ ಮತ್ತು ಪ.ಬಂಗಾಳದ ಬೇಡಿಕೆ ಯೋಜನಾ ಆಯೋಗ ಇತ್ತಿರುವ ಹೇಳಿಕೆ ಇವೆಲ್ಲವೂ, ರಾಜ್ಯಗಳಿಗೆ ಅಂಥ ಅವಕಾಶ ಇಲ್ಲವೆಂಬುದನ್ನು ತೋರಿಸುತ್ತವೆ.

ತಪ್ಪುವಿವರಣೆಗೆ ಅವಕಾಶವಿಲ್ಲ :

ಇಲ್ಲಿನ ಸಲಹೆಯನ್ನು ತಪ್ಪಾಗಿ ಅರ್ಥೈಸಿ ತಪ್ಪಾಗಿ ವಿವರಿಸಬಹುದು. ಆದ್ದರಿಂದ ಇದನ್ನು ಸ್ಪಷ್ಟಪಡಿಸೋಣ. ಲೆಕ್ಕಾಚಾರ ಹಾಕುವುದು ಮತ್ತು ನೀತಿಗಳ ರಚನೆ ರಾಜ್ಯಮಟ್ಟದಲ್ಲಿ ನಡೆಯಬೇಕೆಂದು ನಾವು ಹೇಳಿದ ಮಾತ್ರಕ್ಕೆ ಎಲ್ಲವೂ ರಾಜ್ಯದ ಯೋಜನಾ ಅಧಿಕಾರಿಗಳ ಕೈಯಲ್ಲೇ ಇರಬೇಕೆಂದು ಅರ್ಥವಲ್ಲ. ರಾಜ್ಯಮಟ್ಟದಲ್ಲಿ ಈ ಎಲ್ಲ ಲೆಕ್ಕಾಚಾರ ನೀತಿಗಳ ರಚನೆ ನಡೆದ ಮೇಲೆ ಇವನ್ನು ಯೋಜನಾ ಆಯೋಗ ಮತ್ತು ರಾಷ್ಟ್ರೀಯ ಅಭಿವೃದ್ಧಿ ಸಮಿತಿಗೆ ಕಳಿಸಬೇಕು, ಇದರಲ್ಲಿ ನಿರ್ಣಯ ತೆಗೆದುಕೊಳ್ಳುವ ಕೊನೆಯ ಅಧಿಕಾರ ಅವರದ್ದು. ಕೆಳಹಂತದಿಂದ ಆರಂಭವಾಗುವ ಪ್ರಕ್ರಿಯೆಯನ್ನು ಈ ಕೊನೆಯ ನಿರ್ಣಯ ಒಪ್ಪಿಕೊಳ್ಳಬೇಕೆಂದು ಇಲ್ಲಿ ಸಲಹೆ ಮಾಡಲಾಗಿದೆ.

ಎಂದರೆ, ಕೇಂದ್ರದಲ್ಲಿ ಯೋಜನಾ ಆಯೋಗ ಇರುವ ಹಾಗೆ, ರಾಜ್ಯ, ಜಿಲ್ಲೆ ಮತ್ತು ಕೆಳಹಂತಗಳಿಗೂ ಯೋಜನಾ ಅಧಿಕಾರಿಗಳು ಇರಬೇಕು. ಕೆಳಹಂತಗಳಿಗೆ ಹೋಲಿಸಿದರೆ ರಾಜ್ಯದ ಯೋಜನಾ ಅಧಿಕಾರ ಹೆಚ್ಚು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಏಕೆಂದರೆ ವಿಕೇಂದ್ರೀಕರಣ ಅಲ್ಲಿಂದ ಆರಂಭವಾಗುತ್ತದೆ. ಆದ್ದರಿಂದ ಪ್ರತಿಯೊಂದು ರಾಜ್ಯವೂ ಯೋಜನಾ ಮಂಡಲಿಗಳನ್ನು ರಚಿಸುವುದು ಕಡ್ಡಾಯವಾಗುವಂತಾಗಬೇಕು.

ಕೂಲಂಕುಷ ಪರೀಕ್ಷೆ :

ರಾಜ್ಯದ ಯೋಜನಾ ಮಂಡಲಿಯ ರಚನೆಯ ಜೊತೆಗೆ ಕೇಂದ್ರ ಮತ್ತು ರಾಜ್ಯಗಳ ಯೋಜನೆಗಳ ರಚನಾ ವಿಧಾನದ ಸಂಪೂರ್ಣ ಕೂಲಂಕುಷ ಪರೀಕ್ಷೆ ಇರಬೇಕು.

ಅಖಿಲಭಾರತ ಅಥವಾ ಬಹು ರಾಜ್ಯಗಳಿಗೆ ಸಂಬಂಧಿಸಿದ ಮತ್ತು ಕೇಂದ್ರ ಮಟ್ಟದಲ್ಲಿ ತಾಂತ್ರಿಕ ಮತ್ತು ಹಣಕಾಸು ಸಂಪನ್ಮೂಲಗಳನ್ನು ಒಟ್ಟುಗೂಡಿಸಿದರೆ ಮಾತ್ರ ಜಾರಿಯಾಗುವಂಥ ಯೋಜನೆಗಳನ್ನು ಮಾತ್ರ ಕೇಂದ್ರವು ಕೈಗೊಳ್ಳಬೇಕು. (ಇದು, ಅಗಾಧ ಮತ್ತು ಹೆಚ್ಚು ಪ್ರಮಾಣದ ಕೈಗಾರಿಕೆಗಳು, ಭಾರಿ ನೀರಾವರಿ, ಒಂದು ರಾಜ್ಯಕ್ಕಿಂತ ಹೆಚ್ಚು ರಾಜ್ಯಗಳ ಅಗತ್ಯಗಳನ್ನು ಪೂರೈಸುವ ವಿದ್ಯುಚ್ಛಕ್ತಿ ಯೋಜನೆ, ರೈಲು, ವಿಮಾನ ಸೇರಿದಂತೆ ಅಂತರ ರಾಜ್ಯ ಸಾರಿಗೆ ಇವುಗಳನ್ನು ಅದು ಒಳಗೊಂಡಿರಬೇಕು.)

ಇಷ್ಟನ್ನು ಬಿಟ್ಟರೆ, ಮಿಕ್ಕ ಎಲ್ಲ ಯೋಜನೆಗಳು, ಒಂದೇ ಒಂದು ರಾಜ್ಯದ ಅಗತ್ಯಗಳನ್ನು ಪೂರೈಸುವ ಭಾರಿ ಕೈಗಾರಿಕೆಗಳು ನೀರಾವರಿ ಮತ್ತು ವಿದ್ಯುಚ್ಛಕ್ತಿಯೋಜನೆ ಇವುಗಳೂ ಸೇರಿದಂತೆ ಎಲ್ಲವೂ ರಾಜ್ಯಗಳ ವ್ಯಾಪ್ತಿಗೆ ಸೇರಬೇಕು.

(5ನೇ ಪುಟ ನೋಡಿ)

ಪೋಲೀಸ್ ದಬ್ಬಾಳಿಕೆಯ ಖಂಡನೆ

ಸಿ.ಐ ಟಿ ಯು. ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಸಂಸೆ ಟೀ ತೋಟ ಕಾರ್ಮಿಕರ ಮೇಲೆ ನಡೆಯುತ್ತಿರುವ ಪೋಲೀಸ್ ದಬ್ಬಾಳಿಕೆಯನ್ನು ಖಂಡಿಸಿ ಈ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿರುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಳಸ ಹೋಬಳಿಯಲ್ಲಿ ಕುದುರೆಮುಖಕ್ಕೆ ಎಂಟು ಮೈಲಿ ದೂರದಲ್ಲಿ ಸಂಸೆ ಟೀ ತೋಟವಿದೆ. ಐನೂರಕ್ಕಿಂತಲೂ ಹೆಚ್ಚು ಕಾರ್ಮಿಕರು (ಇವರಲ್ಲಿ ಅರೆವಾಸಿ ಹೆಂಗಸರು) ದುಡಿಯುವ ಈ ತೋಟದ ಒಡೆತನ ಏಕಸ್ವಾಮ್ಯಸ್ಥ ಬಂಡವಾಳಗಾರ ಭಾಂಗೂರ್‌ರವರ ನಿಯಂತ್ರಣದಲ್ಲಿರುವ ಒಂದು ಕಂಪನಿಯದು. ಕಾರ್ಮಿಕರು 18-3-80ರಿಂದ ತಮ್ಮ ಬೇಡಿಕೆಗಳಿಗಾಗಿ ಮುಷ್ಕರ ನಡೆಸುತ್ತಿದ್ದಾರೆ. ಹಲವು ಸುತ್ತಿನ ಸಂಧಾನಗಳಾದರೂ ಮಾಲೀಕರ ಪ್ರತಿನಿಧಿಗಳ ಹಠಮಾರಿತನದಿಂದ ಸಮಸ್ಯೆ ಬಗೆಹರಿಯಲಿಲ್ಲ, ಮುಷ್ಕರ ಮುಂದುವರಿಯಿತು.

ರಾಜ್ಯದ ಪ್ಲಾಂಟೇಷನ್ ಕಾರ್ಮಿಕರ ಚಳುವಳಿಯ ಇತಿಹಾಸದಲ್ಲಿ ಇದು ಅತ್ಯಂತ ದೀರ್ಘಕಾಲದ ಮುಷ್ಕರ. ಕಳೆದ ಹತ್ತು ದಿನಗಳಿಂದ ಮುಷ್ಕರವನ್ನು ಮುರಿಯುವ ಮಾಲೀಕರ ಪ್ರಯತ್ನಕ್ಕೆ ಪೋಲೀಸರ ಕ್ರಿಯಾಶೀಲ ಬೆಂಬಲ; ಮುಷ್ಕರನಿರತ ಕಾರ್ಮಿಕರನ್ನು ಎಡೆಬಿಡದೆ ಕೆಣಕುವುದು, ಪ್ರಚೋದಿಸುವುದು, 16 ರಂದು ಘರ್ಷಣೆ. ಅಂದಿನಿಂದ ಕಾರ್ಮಿಕರ ಮೇಲೆ ಪೋಲೀಸರ ಅಮಾನುಷ ದಬ್ಬಾಳಿಕೆ.

ನಾನು 18ರಂದು ಮಲ್ಲೇಶ್ವರಕ್ಕೆ (ಕುದುರೆಮುಖ) ಭೇಟಿ ಕೊಟ್ಟಿದ್ದೆ. ಸಂಸೆ ಟೀ ತೋಟದ ಕೆಲವು ಕಾರ್ಮಿಕರನ್ನು ಭೇಟಿಯಾಗಿದ್ದೆ. 19ರಂದು ಚಿಕ್ಕಮಗಳೂರಿನ ಬಂದೀಖಾನೆಯಲ್ಲಿ ಬಂಧಿತ 19 ಕಾರ್ಮಿಕರನ್ನು, ಸಂಘದ ಉಪಕಾರ್ಯದರ್ಶಿ ಕಾಂ. ಕೆ. ಸುಕುಮಾರರನ್ನೂ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಂಸೆಯ ಗ್ರಾಮ ಪಂಚಾಯತ್ ಸದಸ್ಯೆ ಶ್ರೀಮತಿ ಅವ್ವ ತಮ್ಮನವರನ್ನೂ ಕಂಡು ಮಾತನಾಡಿದೆ.

ಕಾರ್ಮಿಕರ ಮೇಲೆ ಪೋಲೀಸರು ಅಮಾನುಷ ದಬ್ಬಾಳಿಕೆ ನಡೆಸಿ, ಕಾಂ. ಕೆ. ಸುಕುಮಾರರನ್ನು 17ರ ಮುಂಜಾನೆ ಬಂಧಿಸಿ ಸಂಸೆ ಎಸ್ಟೇಟ್ ಆಫೀಸಿಗೆ ಕೊಂಡೊಯ್ದು ವಿಪರೀತವಾಗಿ ಥಳಿಸಿರುತ್ತಾರೆ. ಪೋಲೀಸರಿಂದ ಪೆಟ್ಟು ತಿಂದ ಕಾರ್ಮಿಕರು ಯಥಾ ಸ್ಥಿತಿಗೆ ಮರಳಲು ಒಂದೆರಡು ವಾರಗಳು ಬೇಕಾಗಬಹುದು.

ಪೋಲೀಸರ ಹೊಡೆತವನ್ನು ತಾಳಲಾರದೆ ಅನೇಕ ಕಾರ್ಮಿಕರು ಬೆಟ್ಟ ಕಾಡಿಗೆ ಓಡಿಹೋಗಿದ್ದಾರೆ. ತೋಟದಲ್ಲಿಯೇ ಇರುವ ಮಹಿಳಾ ಕಾರ್ಮಿಕರನ್ನು ಪೋಲೀಸರು ಹೊಡೆದು ಬೆದರಿಸಿ, ಬಲಾತ್ಕಾರದಿಂದ ಕೆಲಸಕ್ಕೆ ಎಳೆದುಕೊಂಡು ಹೋಗುತ್ತಿದ್ದಾರೆ.

ಈ ರೀತಿ ನಮ್ಮ ರಾಜ್ಯದ ಪೋಲೀಸರು ಏಕಸ್ವಾಮ್ಯಸ್ಥ ಬಂಡವಾಳಗಾರರಾದ ಭಾಂಗೂರರ ಸೇವಕರಾಗಿ ದುಡಿದು ಬದುಕುವ ಪ್ರಜೆಗಳನ್ನು ಮರ್ದಿಸುವ ಕೆಲಸ ಮಾಡುತ್ತಿದ್ದಾರೆ.

ಈ ಪೋಲೀಸ್ ದಬ್ಬಾಳಿಕೆಯನ್ನು ಸಿ.ಐ.ಟಿ ಯು. ರಾಜ್ಯ ಸಮಿತಿಯ ಪರವಾಗಿ ಉಗ್ರವಾಗಿ ಖಂಡಿಸುತ್ತೇನೆ. ಸಂಸೆ ಟೀ ತೋಟ ಕಾರ್ಮಿಕರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ ಕೂಡಲೇ ನಿಲ್ಲಿಸಬೇಕು ಎಂದು ರಾಜ್ಯ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಎಲ್ಲಾ ಪ್ರಜಾಪ್ರಭುತ್ವವಾದಿಗಳೂ ಮಾನವತಾವಾದಿಗಳೂ ಈ ಪೋಲೀಸ್ ದಬ್ಬಾಳಿಕೆಯ ವಿರುದ್ಧ ದನಿ ಎತ್ತಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ
ಸಿ.ಐ.ಟಿ.ಯು. ಬೆಂಗಳೂರು ರಾಜ್ಯ ಸಮಿತಿ

●

ಕೆಳಹಂತದಿಂದ ಯೋಜನೆ ಎಂದರೇನು?

(4ನೇ ಪುಟದಿಂದ)

ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯಗಳು ಹೀಗೆ ಹಂಚಿಕೊಂಡರೆ, ಈದಿನ "ಕೇಂದ್ರದಿಂದ ಯೋಜಿತ" ಮತ್ತು ರಾಜ್ಯಗಳು ಜಾರಿಗೊಳಿಸಬೇಕಾದ "ಕೇಂದ್ರದ ಯೋಜನೆಗಳು" ಮುಂತಾದ ವ್ಯವಸ್ಥೆ ಕೊನೆಗೊಳ್ಳುತ್ತದೆ. ಅಂಥ ಎಲ್ಲ ಯೋಜನೆಗಳನ್ನು ರಾಜ್ಯಗಳಿಗೆ ವರ್ಗಾಯಿಸಬೇಕು.

ಹೀಗೆ ಅಭಿವೃದ್ಧಿಯೋಜನೆಗಳು ಕೇಂದ್ರ ಮತ್ತು ರಾಜ್ಯಗಳು ಹಂಚಿಕೊಳ್ಳುವುದರಿಂದ ಸಂಪನ್ಮೂಲಗಳನ್ನು ಹೆಚ್ಚು ಬುದ್ಧಿವಂತಿಕೆಯಿಂದ ಹಂಚುವುದೂ ಸಾಧ್ಯವಾಗುತ್ತದೆ. ಕೇಂದ್ರದ ಸಂಪನ್ಮೂಲಗಳ ಶೇಕಡಾ 75ರಭಾಗ ರಾಜ್ಯಗಳಲ್ಲಿ ಹಂಚಿಕೆಯಾಗಬೇಕು ಎಂಬ ಪ. ಬಂಗಾಳದ ಬೇಡಿಕೆಯನ್ನು ನೆರವೇರಿಸುವುದು ಆಗ ಅಸಾಧ್ಯವೇನಲ್ಲ. ಏಕೆಂದರೆ ಕೇಂದ್ರ ಸರ್ಕಾರದ ಯೋಜನೆಗಳು ಮೇಲೆ ಹೇಳಿದ ಕನಿಷ್ಠಮಿತಿಯಲ್ಲಿ ಇರುವುದರಿಂದ, ಅಂಥ ಯೋಜನೆಗಳಿಗೆ ಶೇಕಡಾ 25ರ ಸಂಪನ್ಮೂಲಗಳು ಸಾಕು. ಉಳಿದ ಹಣವನ್ನು ರಾಜ್ಯ ಪ್ರತಿನಿಧಿಗಳ ನಡುವೆ ಒಪ್ಪಿತವಾದ ನಿಯಮಗಳ ಮೇರೆಗೆ ರಾಜ್ಯಗಳಿಗೆ ಹಂಚಬಹುದು.

ಅಸ್ಥಿರತೆ ಮಾಯ :

ಇದರಿಂದ ರಾಜ್ಯಗಳ ಅಭಿವೃದ್ಧಿ ಚಟುವಟಿಕೆಗಳಿಗೆ ಸಿಗುವ ಸಂಪನ್ಮೂಲಗಳ ಅಸ್ಥಿರತೆ ಇಲ್ಲವಾಗುತ್ತದೆ. ತಮ್ಮ ರಾಜ್ಯದಲ್ಲೇ ಗಳಿಸಿಕೊಂಡ ಸಂಪನ್ಮೂಲಗಳು ಮತ್ತು ಕೇಂದ್ರವು ಕೊಡುವ ಹಣ ಇವೆರಡರಿಂದ ಅವುಗಳ ಪಂಚವಾರ್ಷಿಕ ಯೋಜನೆಗಳು ಮತ್ತು ವಾರ್ಷಿಕ ಯೋಜನೆಗಳು ಹೆಚ್ಚು ಚೌಕಾಶಿಯಿಲ್ಲದೆ ನಡೆಯುತ್ತವೆ. ಪಂಚವಾರ್ಷಿಕ ಮತ್ತು ವಾರ್ಷಿಕ ಯೋಜನೆಗಳನ್ನು ರೂಪಿಸುವ ಯೋಜನಾ ಮಂಡಲಿಗಳು ಹಣಕಾಸು ಸಂಪನ್ಮೂಲಗಳ ಸಾಧ್ಯತೆಗಳು ಮತ್ತು ಮಿತಿಗಳನ್ನು ಅರಿತು ಕೆಲಸಮಾಡುವಂತಾಗುತ್ತದೆ.

ಕೈಗಾರಿಕೆ, ಕೃಷಿ, ವಿದ್ಯುಚ್ಛಕ್ತಿ, ಸಾರಿಗೆ ಮುಂತಾದ ವಿಭಾಗಗಳಿಗೆ ಕೇಂದ್ರವು ವಿಧಿಸಿರುವ ಹಾಗೆಯೇ ಪಾಲುಕೊಡಬೇಕು ಎಂದು ಕಡ್ಡಾಯ ಮಾಡದೆ. ರಾಜ್ಯಗಳು ತಮ್ಮ ಸಂಪನ್ಮೂಲಗಳನ್ನು ಸ್ವತಂತ್ರವಾಗಿ ಬಳಸಿಕೊಳ್ಳುವಂತೆ ಬಿಡಬೇಕು. ಇದರಿಂದ ಎಲ್ಲ ರಾಜ್ಯಗಳಲ್ಲಿ ಒಂದೇ ರೀತಿ ಆಗುವುದು ತಪ್ಪುತ್ತದೆ. ಒಂದು ರಾಜ್ಯವು ಇನ್ನೊಂದಕ್ಕಿಂತ ಹೆಚ್ಚು ಹಣಕಾಸನ್ನು ಕೈಗಾರಿಕೆಗಿಂತ ಕೃಷಿಯಲ್ಲಿ ತೊಡಗಿಸಬಹುದು; ಭಾರಿ ನೀರಾವರಿಗಿಂತ ಸಣ್ಣ ನೀರಾವರಿಯಲ್ಲಿ ತೊಡಗಿಸಬಹುದು. ರಾಜ್ಯದ ಶಾಸಕಾಂಗ ಮತ್ತು ಕಾರ್ಯಾಂಗಗಳು ಇವುಗಳನ್ನು ನಿರ್ಧರಿಸುವ ಕೊನೇ ಅಧಿಕಾರವಾಗಿರಬೇಕು.

ರಾಜ್ಯಗಳು ತಮ್ಮ ಆಯ್ಕೆಗಳನ್ನು ನಿರ್ಧರಿಸಲು ಸ್ವತಂತ್ರವಾಗಿದ್ದರೂ, ಕೇಂದ್ರ ಯೋಜನಾ ಅಧಿಕಾರವು ಕೊನೇ ನಿರ್ಧಾರವನ್ನು ಕೊಡುವ ಬಲ ಪಡೆದಿಂಬೇಕು. ರಾಜ್ಯಗಳು ಸೂಚಿಸುವ ಯೋಜನೆಗಳು ಕೇಂದ್ರ ಯೋಜನಾ ಆಯೋಗ ಮತ್ತು ರಾಷ್ಟ್ರೀಯ ಅಭಿವೃದ್ಧಿ ಸಮಿತಿಯ ಒಪ್ಪಿಗೆ ಪಡೆಯಬೇಕು. ಕೇಂದ್ರ ಯೋಜನಾ ಅಧಿಕಾರವು ಪ್ರತಿಹೆಜ್ಜೆಯಲ್ಲೂ ನಿರ್ಣಯವನ್ನು ಹೇರುವುದಕ್ಕಿಂದ ಇದು ಭಿನ್ನವಾದುದು.

ಕೆಳಹಂತಗಳಿಗೆ ಅನ್ವಯ :

ಕೇಂದ್ರ ಮತ್ತು ರಾಜ್ಯ ಮಟ್ಟದ ಯೋಜನಾ ವ್ಯವಸ್ಥೆಯೇ ಜಿಲ್ಲೆ ಮುಂತಾದ ಕೆಳಹಂತಗಳಿಗೂ ಅನ್ವಯಿಸುತ್ತದೆ. ಹಣಕಾಸಿನ ಹಂಚಿಕೆಯಲ್ಲೂ ಅದೇ ಮಾದರಿ ಇಲ್ಲಿರಬೇಕು.

ಇದರಿಂದ, ಯೋಜನೆಯ ಕಾರ್ಯದಲ್ಲಿ ಪಂಚಾಯತಿಯಿಂದಾರಂಭವಾದ ಚುನಾಯಿತ ಆಡಳಿತ ಘಟಕಗಳು ಪಾಲ್ಗೊಳ್ಳುವಂತಾಗುತ್ತದೆ. ಎಲ್ಲ ಹಂತಗಳಲ್ಲೂ ರಾಜಕೀಯ-ಆಡಳಿತ ನಾಯಕತ್ವವು ತಮ್ಮ ಮಾನವ ಮತ್ತು ಸಂಪನ್ಮೂಲ ಶಕ್ತಿಯನ್ನು ಬಳಸಿಕೊಂಡು ಉತ್ತಮ ಫಲಿತಾಂಶ ಪಡೆಯಲು ಪ್ರಯತ್ನಿಸುತ್ತಾರೆ. "ಕೆಳಹಂತದಿಂದ ಯೋಜನೆ" ಎಂಬ ಮಾತಿನ ಚೌಕಟ್ಟು ಇದೇ. ಇದುವರೆಗೆ ಇದರ ಮಾತಾಡಲಾಗಿದೆ, ಬಳಕೆಗೆ ತಂದಿಲ್ಲ.

ವಿರೋಧ :

ಆದರೆ ಯೋಜನಾ ಆಯೋಗದ ಅಧಿಕಾರಶಾಹಿ ಅಧಿಕಾರಿಗಳು ಇಂಥದನ್ನು ವಿರೋಧಿಸುವುದು ಸಹಜ. ರಾಜ್ಯಗಳ ಅಧಿಕಾರಿಗಳೂ ಇದನ್ನು ವಿರೋಧಿಸಬಹುದು. ಏಕೆಂದರೆ ವಿಕೇಂದ್ರೀಕರಣದಿಂದ ಅಧಿಕಾರ ಹಂಚಿಕೆಯಾಗುತ್ತದೆ. ಆದರೆ ವಿಕೇಂದ್ರೀಕರಣದಿಂದ ಯೋಜನೆ ಸಫಲವಾಗುತ್ತದೆ.

●

"ಸೀಟೂ ಬಗ್ಗೆ ಅಪಪ್ರಚಾರ ಸಲ್ಲದು"

"ಎ. ಐ. ಟಿ. ಯು. ಸಿ. ಹರಿಜನ ಕಾರ್ಯಕರ್ತ ಕೃಷ್ಣಪ್ಪನವರ ಕೊಲೆಯತ್ನ ಎಂಬ ಶಿರೋನಾಮೆ ಹೊತ್ತ ಏಪ್ರಿಲ್ 27, 1980ರ "ಕೆಂಬಾವುಟ" ವಾರ ಪತ್ರಿಕೆಯನ್ನು ಓದಿದಾಗ ಇದಕ್ಕೆ ಸೀಟೂ ಮುಖಂಡರು ಉತ್ತರ ಕೊಡಬೇಕು ಎಂಬುದನ್ನು ಗಮನಿಸಿ ಈ ಕೆಳಕಂಡ ಉತ್ತರ ಬರೆಯುತ್ತಿದ್ದೇನೆ.

ಏಷ್ಯಾಟಿಕ್ ಆಕ್ಸಿಜನ್ ಎಂಪ್ಲಾಯೀಸ್ ಯೂನಿಯನ್‌ನ ಅಧ್ಯಕ್ಷನಾಗಿ ಇದಕ್ಕೆ ಉತ್ತರ ಬರೆಯಬೇಕಾದದ್ದು ನನ್ನ ಕರ್ತವ್ಯ.

ಸಿ. ಐ. ಟಿ. ಯು. ಹಾಗೂ ಎ ಐ. ಟಿ. ಯು. ಸಿ. ಯ ಮುಖಂಡತ್ವದ ಎರಡು ಕಾರ್ಮಿಕ ಸಂಘಗಳು ಏಷ್ಯಾಟಿಕ್ ಆಕ್ಸಿಜನ್ ಕಾರ್ಖಾನೆಯಲ್ಲಿರುವುದು ನಿಜ. ಇದಕ್ಕೆ ಕಾರಣ ಏನು ಎಂದು ವಿವರಣೆ ಕೊಡುವುದು ಈ ಸಂದರ್ಭದಲ್ಲಿ ಅನಾವಶ್ಯಕ. ಈ ಎರಡು ಸಂಘಗಳೂ ಸುಮಾರು ಒಂದು ವರ್ಷದ ಹಿಂದೆಯೇ ಕಾರ್ಮಿಕರ ಕೆಲವು ಬೇಡಿಕೆಗಳನ್ನಿಟ್ಟು ಮಾಲೀಕರೊಡನೆ ಮಾತುಕತೆ ಮಾಡಲು ಪ್ರಯತ್ನಿಸಿದಾಗ ಸೀಟೂ ಸಂಘಕ್ಕೆ ಮಾಲೀಕರು ಮಾನ್ಯತೆ ಕೊಡದೆ ಇದ್ದ ಕಾರಣ ಕಾರ್ಮಿಕ ಇಲಾಖೆ ಮಧ್ಯೆ ಪ್ರವೇಶಿಸಬೇಕಾಗಿ ಬಂತು. ಕೊನೆಗೆ ಲೇಬರ್ ಕೋರ್ಟಿಗೆ ಕಾರ್ಮಿಕ ಇಲಾಖೆಯಿಂದ "ಒಪ್ಪಂದದ ವಿಷಯದ ಬಗ್ಗೆ" ಇತ್ಯರ್ಥ ಮಾಡುವಂತೆ ಸೂಚನೆ ಬಂತು. ಈ ಮಧ್ಯೆ ಮಾಲೀಕರು ಹೈಕೋರ್ಟಿಗೆ ರಿಟ್ ಕೊಡ ಹೋದರು. ಆದರೆ ಹೈಕೋರ್ಟು ರಿಟ್ ಅನ್ನು ತಿರಸ್ಕರಿಸಿತು.

ಈ ಮಧ್ಯೆ ಮಾಲೀಕರು ಸೀಟೂ ಸಂಘದೊಡನೆ ಮಾತುಕತೆಗೆ ಬರಲು ಒಪ್ಪಿ ಮಾಲೀಕರು ಮತ್ತು ಸೀಟೂ ಸಂಘದೊಡನೆ ಒಂದು ಒಪ್ಪಂದಕ್ಕೆ ಬರಲಾಯಿತು. ಸೀಟೂ ಸಂಘದವರು ಈ ರೀತಿ ಪ್ರಜಾಪ್ರಭುತ್ವ ರೀತಿಯಲ್ಲಿ ಸಂಘದ ಕಾರ್ಯಕ್ರಮ ನಡೆಸುತ್ತಿರುವುದನ್ನು ಎ ಐ ಟಿ.ಯು.ಸಿ. ಗಮನಿಸಬೇಕೆಂದು ನಮ್ಮ ವಿನಂತಿ.

ಆದ್ದರಿಂದ ಕೃಷ್ಣಪ್ಪನವರ ಮೇಲೆ ಯಾರೋ ಗೂಂಡಾಗಳು ದಾಳಿ ನಡೆಸಿದ್ದರೆ ಅದಕ್ಕೆ ಸೀಟೂ ಕಾರಣವೆಂದು ಊಹಿಸುವುದು ತಪ್ಪು ಕಲ್ಪನೆ.

ಕೃಷ್ಣಪ್ಪನವರ ಮೇಲೆ ಈ ರೀತಿ ದಾಳಿ ಆಗಲು ಕಾರಣ ವೈಯುಕ್ತಿಕ ವಿಷಯಗಳಿಗೆ ಸಂಬಂಧಪಟ್ಟದ್ದೆಂದು ಕೆಲವು ಮೂಲಗಳಿಂದ ನಮಗೆ ಗೊತ್ತಾಗಿದೆ. ಇದರ ಬಗ್ಗೆ ಎ ಐ ಟಿ ಯು ಸಿ. ಬೆಂಗಳೂರು ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಬಾಬು ಮ್ಯಾಥ್ಯೂರವರು ನನ್ನೊಡನೆ ಚರ್ಚಿಸಿ ಅವರಿಗೆ ಸಮಜಾಯಿಸಿ ಉತ್ತರ ಸಿಗದಿದ್ದರೆ ತಮ್ಮ ಪತ್ರಿಕೆಯಲ್ಲಿ ಬರೆದಿದ್ದರೆ ನನ್ನ ಅಭ್ಯಂತರವಿರಲಿಲ್ಲ. ಈಗಲೂ ಈ ವಿಷಯದ ಬಗ್ಗೆ ಚರ್ಚಿಸಲು ಅವರಿಗೆ ಕಾಲ ಮೀರಿಲ್ಲ ಎಂದು ಈ ಮೂಲಕ ತಿಳಿಯಪಡಿಸುತ್ತೇನೆ. ಕೃಷ್ಣಪ್ಪನವರ ಮೇಲೆ ಧಾಳಿ ನಡೆಸಿರುವ ಗೂಂಡಾಗಳು ಯಾರೇ ಆಗಿರಲಿ ಅವರಿಗೆ ಉಗ್ರ ಶಿಕ್ಷೆಯಾಗಬೇಕೆಂದು ಈ ಮೂಲಕ ತಿಳಿಯಪಡಿಸುತ್ತೇನೆ.

ಒಟ್ಟಿನಲ್ಲಿ ಸೀಟೂ ಸಂಘದವರು ಇಂತಹ ಹೀನ ಕೃತ್ಯ ಎಸಗುವವರೆಂದು ಅನುಮಾನಿಸಿರುವುದು ನನಗೆ ತುಂಬಾ ಕಳವಳ ಉಂಟುಮಾಡಿದೆ.

ಟಿ. ಎಸ್. ಅನಂತರಾಂ
ಪ್ರಧಾನ ಕಾರ್ಯದರ್ಶಿ
ಸಿ. ಐ. ಟಿ. ಯು.
ಬೆಂಗಳೂರು ಜಿಲ್ಲಾ ಸಮಿತಿ

○

"ಕುಣಿಗಲ್‌ನಲ್ಲಿ ಮೇ ದಿನಾಚರಣೆ"

ತಾ. 13-5-80 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಶಾಖೆಯ ಆಫೀಸಿನಲ್ಲಿ ಮೇ ದಿನಾಚರಣೆಯ ಸಭೆಯನ್ನು ಕುಣಿಗಲ್ ಪುರಸಭೆ ಸದಸ್ಯೆ ಕಾಂ. ಶ್ರೀಮತಿ ಸಾಭಿರಾಬಿರವರ ಅಧ್ಯಕ್ಷತೆಯಲ್ಲಿ ನಡೆಸಲಾಯ್ತು. ಮೇ ದಿನಾಚರಣೆಯ ವಿಷಯವನ್ನು ಮತ್ತು ಕೆಂಪು ಬಾವುಟವು ಬಂಡವಾಳಶಾಹಿಯ ರಾಷ್ಟ್ರವಾದ ಅಮೇರಿಕದಲ್ಲಿ ಹೇಗೆ ಉದ್ಭವವಾಯಿತು ಎಂಬುದನ್ನು ಕಾಂ. ಅಂಜಪ್ಪನವರು ಸಭೆಯಲ್ಲಿ ತಿಳಿಸಿದರು. ತಾ. 13-5-80ರಂದು ಕರ್ನಾಟಕ ರಾಜ್ಯದ ಸಿ. ಐ. ಟಿ. ಯು. ಅಧ್ಯಕ್ಷ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನಾಯಕ ಕಾಂ. ಎಸ್. ಸೂರ್ಯನಾರಾಯಣರಾವ್ ರವರಿಗೆ ರಾಜ್ಯಸರ್ಕಾರ ಗಡಿಪಾರು ಆಜ್ಞೆ ಮಾಡಿರುವುದನ್ನು ಈ ಸಭೆಯಲ್ಲಿ ಖಂಡಿಸಲಾಯಿತು. ಕಾರ್ಮಿಕ ಮುಖಂಡರ ಮೇಲೆ ಗಡಿಪಾರು ಆಜ್ಞೆ ವಿಧಿಸಿರುವುದನ್ನು ಸರ್ಕಾರ ಕೂಡಲೇ ವಾಪಸು ತೆಗೆದುಕೊಳ್ಳಬೇಕೆಂದು ಸಭೆಯು ಒತ್ತಾಯಿಸಿತು.

ಈ ಸಭೆಗೆ ಮುಖ್ಯ ಅತಿಥಿಯಾಗಿ ಬಂದಿದ್ದ ಡಾ॥ ಅಂಬೇಡ್ಕರ್ ಯುವಕ ರೈತಸಂಘದವರಿಗೂ ಮತ್ತು ಕುಣಿಗಲ್ ಶಾಖೆಯ ಕೆ. ಇ. ಬಿ. ನೌಕರರಾದ ಶ್ರೀಯುತ ಹುಚ್ಚಪ್ಪ ಮತ್ತು ಕುಣಿಗಲ್ ಟೆಲಿಫೋನ್ ಎಕ್ಸ್‌ಚೇಂಜ್ (ಪಿ ಟಿ) ನೌಕರರಾದ ಹೋಬಳಯ್ಯನವರನ್ನೂ ಸ್ವಾಗತಿಸಿದ ಮೇಲೆ ಶ್ರೀಯುತ ಹುಚ್ಚಪ್ಪನವರು ಸಭೆಯನ್ನುದ್ದೇಶಿಸಿ ಮಾತಾಡಿದ ನಂತರ ಸಭೆಯು ಮುಕ್ತಾಯವಾಯಿತು.

○

ಗಡೀಪಾರು ಕ್ರಮಕ್ಕೆ ಉಚ್ಚನ್ಯಾಯಾಲಯದ ತಡೆಯಾಜ್ಞೆ

ಮೈಕೋ ಕಾರ್ಮಿಕರ ಸಂಘದ ಪದಾಧಿಕಾರಿಗಳಾದ ಕಾಂ. ಸೂರ್ಯನಾರಾಯಣ ರಾವ್, ನೀಲಕಂಠಯ್ಯ, ನರಸಿಂಹಯ್ಯ, ಕೃಷ್ಣಮೂರ್ತಿ, ಫಿಲಿಪ್ಸ್ ನರೋನ, ಆಲ್ಬರ್ಟ್, ಸುದರ್ಶನ್ ಮತ್ತು ಕೃಷ್ಣಪ್ಪನವರನ್ನು ಬೆಂಗಳೂರಿನಿಂದ ಗಡೀಪಾರು ಮಾಡುವ ಉದ್ದೇಶದಿಂದ ಪ್ರಾರಂಭಿಸಲಾಗಿರುವ ವಿಚಾರಣಾ ಕ್ರಮಕ್ಕೆ ಕರ್ನಾಟಕದ ಉಚ್ಚನ್ಯಾಯಾಲಯ ತಡೆಯಾಜ್ಞೆ ನೀಡಿದೆ.

ಪೋಲೀಸ್ ಕ್ರಮದ ಕ್ರಮಬದ್ಧತೆಯನ್ನು ಪ್ರಶ್ನಿಸಿರುವ ಕಾರ್ಮಿಕ ಸಂಘದ ಪದಾಧಿಕಾರಿಗಳು "ಗಡೀಪಾರು ಆಜ್ಞೆ-ಸ್ಥಾನಬದ್ಧತಾ ಕಾಯ್ದೆ (MISA)ಗಿಂತಲೂ ತೀವ್ರತರವಾದದ್ದು ಹಾಗೂ ಜನತೆಯ ಹಕ್ಕುಗಳನ್ನು ಮೋಸದಿಂದ ಕಸಿದುಕೊಳ್ಳುವಂಥಾದ್ದು" ಎಂದಿದ್ದಾರೆ. ಏಕೆಂದರೆ ಸ್ಥಾನಬದ್ಧತಾ ಶಾಸನದ ರೀತ್ಯ ಬಂಧನಕ್ಕೆ ಒಳಗಾದ ವ್ಯಕ್ತಿಗೆ ವಾಸ ಮತ್ತು ಊಟದ ಸಮಸ್ಯೆ ಇರುವುದಿಲ್ಲ, ಅವರ ಕುಟುಂಬಕ್ಕೆ ಪರಿಹಾರ ಸಿಗುವುದರಿಂದ ನಿರ್ವಹಣೆಯ ಸಮಸ್ಯೆ ಬರುವುದಿಲ್ಲ, ಆದರೆ ಗಡೀಪಾರು ಆದವರು ತಮ್ಮ ವಾಸಸ್ಥಳ-ಕುಟುಂಬಗಳನ್ನು ಬಿಟ್ಟು ಪರಸ್ಥಳಕ್ಕೆ ಹೋಗಿ ಮಾಡುವುದೇನು? ಗಡೀಪಾರು ಆದವರು ಹಾಗೂ ಅವರ ಕುಟುಂಬಗಳ ರಕ್ಷಣೆಯ ಹೊಣೆ ಯಾರದು?

ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಅಡಿಯಲ್ಲಿ ವ್ಯಕ್ತಿಸ್ವಾತಂತ್ರ್ಯದ ಭರವಸೆ ನೀಡಲಾಗಿದೆ. ಆದರೆ ಪೋಲೀಸರ ಕ್ರಮ ಮೂಲಭೂತ ಹಕ್ಕುಗಳನ್ನು ಪ್ರತಿಯೊಬ್ಬ ಪ್ರಜೆಗೂ ನೀಡಲಾಗಿದೆ ಎಂದು ಹೇಳುವ ಸಂವಿಧಾನದ ವಿಧಿ 19, 21 ಮತ್ತು 22ನ್ನು ಉಲ್ಲಂಘಿಸುತ್ತದೆ.

ಆದ್ದರಿಂದ ಸಂವಿಧಾನಾತ್ಮಕ ವಿಧಿಗಳನ್ನು ಮೀರುವುದಕ್ಕೆ ಪೋಲೀಸರಿಗೆ ಮಾತ್ರವಲ್ಲ ರಾಜ್ಯದ ವಿಧಾನಸಭೆಗೂ ಹಕ್ಕಿಲ್ಲ. ಹಕ್ಕಿರುವುದು ಕೇವಲ ಸಂಸತ್ತಿಗೆ ಮಾತ್ರ. ಇಷ್ಟಾದರೂ ಅಧಿಕಾರ ಮೀರಿ ವರ್ತಿಸುತ್ತಿರುವ ಪೋಲೀಸರು ಪದಾಧಿಕಾರಿಗಳಿಗೆ ಕೊಟ್ಟಿರುವ ನೋಟೀಸಿನಲ್ಲಿ ನಿರ್ದಿಷ್ಟ ಆಪಾದನೆಗಳನ್ನು ನಮೂದಿಸಿಲ್ಲ. ಅಂದರೆ ಗಡೀಪಾರಿನ ಉದ್ದೇಶ ರಾಜಕೀಯ ಕಾರಣಗಳಿಂದ ಕೂಡಿದೆ ಎಂಬುದು ಸ್ಪಷ್ಟ. ಆಳುವ ವರ್ಗಗಳಿಗೆ ವಿರುದ್ಧವಾದ ಜನಪರ ನೀತಿಗಳನ್ನು ಅನುಸರಿಸುತ್ತಿರುವ ಸಿ.ಪಿ.ಐ.(ಎಂ) ಮತ್ತು ಸಿ. ಐ. ಟಿ.ಯು. ವನ್ನು ಒಡೆಯಲು ಆಳುವ ವರ್ಗ, ಪೋಲೀಸರು ಹಾಗೂ ಕಾರ್ಖಾನೆ ಮಾಲೀಕರು ಒಂದಾಗಿದ್ದಾರೆ. ಇದರಿಂದ ಮೈಕೋ ಕಾರ್ಖಾನೆಯಲ್ಲಿ ಕಾರ್ಮಿಕರ ಸಂಘಟನೆಯನ್ನು ಒಡೆದು ಮಾಲೀಕರ ಚಮಚಾ ಸಂಘಟನೆಯನ್ನು ಕಟ್ಟುವುದೇ ಗಡೀಪಾರು ಕ್ರಮದ ಹಿಂದಿರುವ ಉದ್ದೇಶ ಎಂಬುದು ಸ್ಪಷ್ಟವಾಗಿದೆ.

ಕಾರ್ಮಿಕರ ಪರವಾಗಿ ರಾಜ್ಯದ ಮಾಜೀ ಅಡ್ವೊಕೇಟ್ ಜನರಲ್ ಶ್ರೀ ಆರ್. ಎನ್. ಭೈರಾರೆಡ್ಡಿ ವಕಾಲತ್ತು ವಹಿಸಿದ್ದಾರೆ. ಶ್ರೀ ಗೋಪಾಲಗೌಡ ಮತ್ತು ಎಸ್. ಚೆನ್ನರಾಯರೆಡ್ಡಿಯವರು ಸಹಾಯ ಮಾಡುತ್ತಿದ್ದಾರೆ.

ಗಡೀಪಾರು ಕ್ರಮದ ವಿರುದ್ಧ ಪ್ರತಿಭಟನಾ ಪ್ರದರ್ಶನ ನಡೆಸಲು ಉದ್ದೇಶಿಸಿದ್ದ ಮೈಕೋ, ಐ. ಟಿ. ಸಿ. ಕಾರ್ಖಾನೆಗಳ ಹಾಗೂ ಸಿ.ಐ.ಟಿ.ಯು.ಗೆ ಸೇರ್ಪಡೆಯಾಗಿರುವ ಕಾರ್ಮಿಕ ಸಂಘಗಳ ಕಾರ್ಮಿಕರು ಪ್ರದರ್ಶನ ನಡೆಸದಂತೆ ಅಡ್ಡಿ ಉಂಟುಮಾಡಲು ಬೆಂಗಳೂರು ನಗರದಲ್ಲಿ ಸೆಕ್ಷನ್ 35ನ್ನು ಹೇರಿರುವುದಾಗಿ ಪೋಲೀಸ್ ಕಮಿಷನರ್ ಹೊರಡಿಸಿರುವ ಆಜ್ಞೆಯ ಔಚಿತ್ಯವನ್ನು ಸಹಾ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ.

ರಿಟ್ ಅರ್ಜಿಯನ್ನು ಸ್ವೀಕರಿಸಿರುವ ಉಚ್ಚನ್ಯಾಯಾಲಯ ಪೋಲೀಸ್ ಕ್ರಮಕ್ಕೆ ತಡೆಯಾಜ್ಞೆ ನೀಡಿ, ಸರಕಾರಕ್ಕೆ ನೋಟೀಸು ನೀಡಿದೆ.

ಐ.ಟಿ.ಸಿ. :-

ಇಂಡಿಯನ್ ಟೊಬ್ಯಾಕೋ ಕಂಪನಿಯ ಆಡಳಿತವರ್ಗ ಕಾರ್ಮಿಕರನ್ನು ವಂಚಿಸಿ ತನ್ನ ಹಸ್ತಕರ ಸಹಾಯದಿಂದ ಮಾಡಿಕೊಂಡ ಅಕ್ರಮ ಒಪ್ಪಂದವನ್ನು ವಿರೋಧಿಸಿ ಕಾರ್ಮಿಕರು ನಡೆಸುತ್ತಿದ್ದ ಮುಷ್ಕರವನ್ನು ಸರಕಾರ ನಿಷೇಧಿಸಿದೆ. ಮುಷ್ಕರ ನಿಷೇಧ ಆಜ್ಞೆಯನ್ನು ಪ್ರಶ್ನಿಸಿ ಕಾರ್ಮಿಕ ಸಂಘ ರಾಜ್ಯದ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದೆ. ಕಳೆದ ಒಂದುವರೆ ತಿಂಗಳಿಂದ ವಿಚಾರಣೆ ನಡೆಯುತ್ತಿದ್ದರೂ ಸಮಸ್ಯೆ ಇತ್ಯರ್ಥವಾಗಿಲ್ಲ

ತಾ. 24-5-80ರಂದು ನಡೆದ ವಿಚಾರಣೆ ಸಮಯದಲ್ಲಿ ನ್ಯಾಯಾಧೀಶರು ತತ್ಕಾಲಕ್ಕೆ ಒಪ್ಪಂದದ ಬಗ್ಗೆ ಉಂಟಾಗಿರುವ ವಿವಾದವನ್ನು ಬದಿಗಿಟ್ಟು ಹಾಲಿ ರಾಜ್ಯದ ಅಡ್ವೊಕೇಟ್ ಜನರಲ್‌ರವರ ಸಮ್ಮುಖದಲ್ಲಿ ಪರಸ್ಪರ ಮಾತುಕತೆ ನಡೆಸಿ ಕಾರ್ಖಾನೆಯಲ್ಲಿ ಕೆಲಸ ಪ್ರಾರಂಭಿಸಲು ಪ್ರಯತ್ನಿಸಬಹುದೆಂದು ಸಲಹೆ ನೀಡಿದರು. ಆದರೆ ಆಡಳಿತ ವರ್ಗಕ್ಕೆ ನ್ಯಾಯಾಧೀಶರ ಸಲಹೆ ಹಿಡಿಸಲಿಲ್ಲವಾದ್ದರಿಂದ ಸಮಸ್ಯೆ ಹಾಗೇ ಉಳಿದಿದೆ. ಮುಷ್ಕರ ಮುಂದುವರಿದಿದೆ. ಕೇಸಿನ ವಿಚಾರಣೆ ತಾ. 29-5-80ಕ್ಕೆ ಮುಂದೂಡಲಾಗಿದೆ.

ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಲು ಸಿದ್ಧತೆ:

ಕರ್ನಾಟಕ ರಾಜ್ಯ ಸರಕಾರ ಜಾರಿಗೆ ತರಲು ಉದ್ದೇಶಿಸಿರುವ ಅಗತ್ಯ ಸೇವಾ ಕಾನೂನು ಕಾರ್ಮಿಕ ವಿರೋಧಿ ಕಾನೂನಾಗಿದ್ದು, ಕಾರ್ಮಿಕರ ಮೂಲಭೂತ ಹಕ್ಕಾದ, ಮುಷ್ಕರದ ಹಕ್ಕನ್ನು ಕಸಿದುಕೊಳ್ಳುತ್ತದೆ. ಕಾರ್ಖಾನೆಗಳ ಮಾಲೀಕರಿಗೆ, ಬಂಡವಾಳಶಾಹಿಗಳಿಗೆ ದುಡಿಯುವ ಜನತೆಯ ಹೋರಾಟವನ್ನು ಬಗ್ಗುಬಡಿಯಲು ಸಹಾಯ ಮಾಡುತ್ತದೆ ಶ್ರೀಮಾನ್ ಗುಂಡೂರಾಯರ ಸರಕಾರದ ಈ ಕ್ರಮವನ್ನು ಪ್ರತಿಭಟಿಸಲು ಕೇಂದ್ರ ಕಾರ್ಮಿಕ ಸಂಘಟನೆಗಳು ಸಮಾವೇಶ ತಾ॥ 1-6-80ರಂದು ಬೆಂಗಳೂರಿನಲ್ಲಿ ದೇವಲಮಹರ್ಷಿ ಆಶ್ರಮದಲ್ಲಿ (ಕಾರ್ಪೊರೇಷನ್ ಬಳಿ) ನಡೆಯಲಿದೆ. ಸಮಾವೇಶದಲ್ಲಿ ಸಿ ಐ ಟಿ ಯು ,ಎ.ಐ.ಟಿ ಯು.ಸಿ , ಐ.ಎನ್.ಟಿ.ಯು.ಸಿ. (ಯು),ಹೆಚ್.ಎಂ.ಎಸ್., ಬಿ.ಎಂ.ಎಸ್. ಸಂಘಟನೆಗಳು ಭಾಗವಹಿಸಲಿವೆ

●

ಪ್ರತಿಭಟನಾ ಸಭೆ

23-5-80ರಂದು ಬೆಂಗಳೂರು ಕೆ.ಆರ್. ಪುರಂ ರೈಲ್ವೆ ನಿಲ್ದಾಣ ಬಳಿಯ ಕೊತ್ತನೂರಿನಲ್ಲಿ ಸಿ.ಐ.ಟಿ.ಯು. ಸಂಘಗಳು ಸಿ.ಐ.ಟಿ.ಯು. ರಾಜ್ಯಸಮಿತಿ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ಸೇರಿದಂತೆ ಮೈಕೋ ಕಾರ್ಮಿಕ ಸಂಘದ ಪದಾಧಿಕಾರಿಗಳನ್ನು ಗಡಿಪಾರ್ ಮಾಡುವ ಮೂಲಕ ಕಾರ್ಮಿಕ ಸಂಘಟನೆಗಳನ್ನು ಒಡೆಯಲು ಉದ್ದೇಶಿಸಿರುವ ರಾಜ್ಯ ಸರಕಾರದ ವಿರುದ್ಧ ಈಗ ಸೆಲೆಕ್ಟ್ ಸಮಿತಿಯ ಮುಂದಿರುವ ಅಗತ್ಯ ಸೇವಾ ಮಸೂದೆಯನ್ನು ವಿರೋಧಿಸಲು ಹಾಗೂ ನಗರದಲ್ಲಿ ಪೋಲೀಸ್ ಆಕ್ಟ್ 35ರ ಅನ್ವಯ ವಿಧಿಸಿರುವ ಸಭೆ ಮೆರವಣಿಗೆಯ ನಿಷೇದಾಜ್ಞೆಯನ್ನು ವಿರೋಧಿಸಲು ಸಹಸ್ರಾರು ಕಾರ್ಮಿಕರು ಮೆರವಣಿಗೆಯಲ್ಲಿ ಸಭೆಗೆ ಬಂದರು. ಸಮುದಾಯ ತಂಡದವರಿಂದ ದಲಿತರ ಶೋಷಣೆಯ ಕ್ರಾಂತಿ ಗೀತೆಗಳನ್ನು ಹಾಡಿದ ನಂತರ ಸಭೆ ಆರಂಭವಾಯಿತು. ಸಭೆಯ ಉದ್ದೇಶವನ್ನು ಜಿಲ್ಲಾ ರೈತಸಂಘದ ಉಪಾಧ್ಯಕ್ಷ ಕಾಂ. ಶ್ಯಾಮಣ್ಣರೆಡ್ಡಿಯವರು ತಿಳಿಸಿದರು. ಫೋಲ್ಬಾಸ್ ಕಾರ್ಮಿಕ ಸಂಘದ ಕಾಂ. ಸುಬ್ರಮಣ್ಯಂ, ಮೈಕೋ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ನೀಲಕಂಠಯ್ಯ, ಐ. ಟಿ. ಸಿ. ಕಾರ್ಮಿಕ ನಾಯಕ ವೆಂಕಟೇಶನವರು ಮಾತನಾಡಿ ಆಡಳಿತವರ್ಗ ಕಾರ್ಮಿಕರ ಐಕ್ಯತೆಯನ್ನು ಮುರಿಯಲು ಗೂಂಡಾಗಳಿಂದ ನಡೆಸುತ್ತಿರುವ ಹಲ್ಲೆಗಳನ್ನು ಖಂಡಿಸಿದರು. ಸರಕಾರ ಕಾರ್ಮಿಕರ ವಿಷಯವನ್ನು ತಿಳಿಯದೆ ಏಕಪಕ್ಷೀಯವಾಗಿ ಮುಷ್ಕರ ನಿಷೇಧಿಸಿರುವುದನ್ನು ಕಾರ್ಮಿಕ ವಿರೋಧಿ ನೀತಿಯೆಂದು ತಿಳಿಸಿದರು. ಕಾಂ. ಸೂರ್ಯನಾರಾಯಣ ರಾವ್ ರವರು "ಭೂತಲಿಂಗಂವರದಿಗೆ ವಿರೋಧವಿದ್ದು ಮೈಕೋ ಕಾರ್ಮಿಕರ ಹೋರಾಟದಲ್ಲಿ ಬೆಂಬಲವ್ಯಕ್ತಪಡಿಸಿದ್ದ" ಇಂದಿರಾಗಾಂಧಿ ಪಕ್ಷವು ಈಗ ಮಹಾರಾಷ್ಟ್ರ ಮತ್ತು ಗುಜರಾತ್‌ನಲ್ಲಿ ಮುಷ್ಕರ ನಿಶೇದಾಜ್ಞೆಯನ್ನು ಜಾರಿಮಾಡಿರುವುದು. ನಮ್ಮ ರಾಜ್ಯದಲ್ಲಿ ಮುಷ್ಕರ ನಿಷೇಧಿಸುವ ಮಸೂದೆ ಸೆಲೆಕ್ಟ್ ಕಮಿಟಿಯ ಮುಂದಿರುವುದು, ದೇಶದಲ್ಲಿ ಸುಭದ್ರ ಸರಕಾರವಿದ್ದರೆ ಮಾತ್ರ ಸರಿಯಾಗಿ ಆಡಳಿತ ನಡೆಸಲು ಸಾಧ್ಯವೆಂದು ಇಂದಿರಾಗಾಂಧಿ ಪಕ್ಷವು ಚುನಾವಣೆಯಲ್ಲಿ ಪ್ರಚಾರಮಾಡಿ ಅಧಿಕಾರಕ್ಕೆ ಬಂದ ಮೇಲೆ ಬೆಲೆಗಳು ಏರಿರುವುದು, ಕಾನೂನು ಮತ್ತು ಶಿಸ್ತು ಅಸ್ಸಾಂನಲ್ಲಿ ಕುಸಿದು ಬಿದ್ದಿರುವುದು, ದುಡಿಯುವ ಜನತೆಯ ರಕ್ಷಣೆಯ ಬದಲು ಗುತ್ತೇದಾರಿ ಬಂಡವಾಳಗಾರರಿಗೂ, ದೊಡ್ಡ ಭೂಮಾಲಕರಿಗೂ, ಬಹುರಾಷ್ಟ್ರೀಯ ಸಂಸ್ಥೆಯವರಿಗೂ ಸರಕಾರ ರಕ್ಷಣೆ ಕೊಡುತ್ತಿರುವುದನ್ನು ವಿವರಿಸಿದರು. ಕಾರ್ಮಿಕರ ಐಕ್ಯತೆಯನ್ನು ಒಡೆಯಲು ಮೈಕೋ ಮತ್ತು ಐ. ಟಿ. ಸಿ. ಆಡಳಿತವರ್ಗ ಕಾರ್ಮಿಕರ ಮೇಲೆ ಗೂಂಡಾಗಳಿಂದ ಹಲ್ಲೆ ನಡೆಸುತ್ತಿರುವ ಬಗ್ಗೆ ಸಂಘದ ನಾಯಕರು ಸರಕಾರಕ್ಕೂ ಪೋಲೀಸ್ ಅಧಿಕಾರಿಗಳಿಗೂ ತಿಳಿಸಿದರೂ ಸಹ ಅಪರಾಧಿಗಳನ್ನು ಪತ್ತೆಹಚ್ಚುವಲ್ಲಿ ವಿಫಲರಾಗಿ ಶಾಂತಿ ಮತ್ತು ರಕ್ಷಣೆಯ ನೆಪದಲ್ಲಿ ಸಂಘದ ಪದಾಧಿಕಾರಿಗಳನ್ನು ಗಡಿಪಾರು ಮಾಡುವ ಬಗ್ಗೆ ವಿಷಾದಿಸಿದರು, ಪ್ರಜಾಪ್ರಭುತ್ವ ರೀತಿಯಲ್ಲಿ ಕಾರ್ಮಿಕ ಸಂಘಟನೆಯನ್ನು ಮಾಡುವುದು ಸರಕಾರದ ದೃಷ್ಟಿಯಲ್ಲಿ ತಪ್ಪಾಗಿದೆ. ರಾಜ್ಯದ ಇಂಟಕ್ ಅಧ್ಯಕ್ಷರು ಸಭೆಗಳಲ್ಲಿ ಪತ್ರಿಕೆಗಳಲ್ಲಿ ಹಾಕಿರುವ ಬೆದರಿಕೆಗಳನ್ನು ತಿಳಿಸಿದರು. ತಮ್ಮ ಕೊಲೆ ಸಂಚನ್ನು ಕೆಲವು ಗೂಂಡಾಗಳು ಸಿದ್ಧರಾಗುತ್ತಿರುವುದನ್ನು ತಿಳಿಸಿದರು. ತಿಳಿಗೇಡಿಗಳು ಯಾರೆಂಬುದು ಪೋಲೀಸ್ ಅಧಿಕಾರಿಗಳಿಗೆ ತಿಳಿದಿದ್ದರೂ ಇದರ ಬಗ್ಗೆ ಕ್ರಮತೆಗೆದುಕೊಳ್ಳದೆ ಇರುವ ಬಗ್ಗೆ ತಿಳಿಸಿ, ಕಾರ್ಮಿಕವರ್ಗಕ್ಕೆ ಏನಾದರೂ ಅನ್ಯಾಯವಾದರೆ ಅದು ಸಹಿಸದು ಇತಿಹಾಸದ ಉದಾಹರಣೆಕೊಟ್ಟರು, ಹೈಕೋರ್ಟ್ ಗಡಿಪಾರು ಆಜ್ಞೆಯ ವಿರುದ್ಧ ತಡೆಯಾಜ್ಞೆ ಕೊಟ್ಟಿರುವುದನ್ನು ತಿಳಿಸಿದಾಗ ಕಾರ್ಮಿಕರು ಹರ್ಷೋದ್ಗಾರಗಳನ್ನು ಮಾಡಿದರು. ಎರಡು ತಿಂಗಳಿನಿಂದ ಲಾಕೌಟ್ ಆಗಿರುವ ಮ್ಯಾಗ್ನೀಷಿಯಂ ಕೆಲಸಗಾರರ ಹೋರಾಟ ನಿಧಿಗೆ ಮೈಕೋ ಸಂಘದಿಂದ 250 ರೂ. ಕೊಡಲಾಯಿತು. ಕಾರ್ಮಿಕರಿಂದ ಸಭೆಯಲ್ಲಿ 82 ರೂ. ವಸೂಲಿ ಆಯಿತು. ಈ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಿ. ಐ. ಟಿ. ಯು. ಉಪಾಧ್ಯಕ್ಷ ಕಾಂ. ನಾರಾಯಣ ರಾವ್ ವಹಿಸಿದ್ದರು. ವಂದನೆಯಾದ ನಂತರ ಘೋಷಣೆಗಳೊಂದಿಗೆ ಸಭೆ ಮುಕ್ತಾಯವಾಯಿತು.

○

ಕಾಮನ್‌ವೆಲ್ತ್ ಹಂಚಿನ ಕಾರ್ಖಾನೆಯ ಕಾರ್ಮಿಕರ ವಿಜಯ

ದ.ಕ. ಜಿಲ್ಲಾ ಮಂಗಳೂರಿನಲ್ಲಿರುವ ಎರಡು ಕಾಮನ್‌ವೆಲ್ತ್ ಹಂಚಿನ ಕಾರ್ಖಾನೆಗಳ ಕೂಲಿ ಹೆಚ್ಚಳದ ವಿವಾದವು ಬೆಂಗಳೂರಿನ ಕೈಗಾರಿಕಾ ನ್ಯಾಯಾಲಯದ ಮುಂದೆ ಇತ್ತು. 1975ರಿಂದ ಈ ವಿವಾದವು ಪ್ರಾರಂಭವಾಯಿತು. ಈ ಮಧ್ಯ ತುರ್ತುಪರಿಸ್ಥಿತಿಯಲ್ಲಿ "ಇಂಟಕ್"ನವರು ಜಪ್ಪು ಫ್ಯಾಕ್ಟರಿಯಲ್ಲಿ ಮಜೂರರಿಗೆ ಕೆಲವು ಆಸೆ ತೋರಿಸಿ ತಮ್ಮ ಯೂನಿಯನ್ನಿಗೆ ಸದಸ್ಯರನ್ನಾಗಿ ಮಾಡಿ ಬೇಡಿಕೆಗಳ ಬಗ್ಗೆ ವಿವಾದವನ್ನೆಬ್ಬಿಸಿದರು 1978ರಲ್ಲಿ ಮೇನೇಜುಮೆಂಟು ಸಿ. ಐ. ಟಿ. ಯು. ಯೂನಿಯನನ್ನು ಪುಡಿಮಾಡುವ ಉದ್ದೇಶದಿಂದ 'ಇಂಟಕ್'ನವರೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡಿತ್ತು. ಆದರೆ ಕೈಗಾರಿಕಾ ನ್ಯಾಯಾಲಯದಲ್ಲಿ ಆ ಒಪ್ಪಂದವನ್ನ ಅಂಗೀಕರಿಸಲು ಮೇನೇಜುಮೆಂಟಿಗೆ ಸಾಧ್ಯವಾಗಲಿಲ್ಲ ಈ ಮಧ್ಯ ಕುದ್ರೋಳಿ ಕಾಮನ್‌ವೆಲ್ತ್‌ನ ಮಜೂರರು ಈ ವಿವಾದ ಇತ್ಯರ್ಥವಾಗುವವರೆಗೆ ಮಧ್ಯಾವಧಿ ಪರಿಹಾರ ಕೊಡಬೇಕು ಮತ್ತು ದಿನದ ಇಡೀ ಸಂಪಾದನೆಯ ಮೇಲೆ ಬೋನಸ್ಸು ಕೊಡಬೇಕು ಎಂಬ ಬೇಡಿಕೆಗಳನ್ನು ಮೇನೇಜುಮೆಂಟಿನ ಮುಂದೆ ಇಟ್ಟು ಇದನ್ನು ಪಡೆಯಲು ಒತ್ತಾಯಪಡಿಸಲಾರಂಭಿಸಿದರು. ಮೇನೇಜುಮೆಂಟು ಇದನ್ನು ಇತ್ಯರ್ಥ ಮಾಡುವ ಬದಲಿಗೆ ತಾ. 4-3-1980 ರಿಂದ ಕಾರ್ಖಾನೆಯನ್ನು "ಲಾಕೌಟು" ಮಾಡಿತು. ಈ ವಿವಾದವು ಬೆಂಗಳೂರಿನ ಜಾಯಿಂಟ್ ಲೇಬರ್ ಕಮೀಷನರವರ ಮುಂದೆ ತಾ. 22-4-80ರಂದು ಪಂಚಾಯತಿಗೆ ನಡೆದು ಹಿಂದೆ ಒಪ್ಪಂದದಲ್ಲಿ ಮೂಲಕೂಲಿಯಲ್ಲಿ ಏರಿಸಿದ 11 ಪೈಸೆ ಹೆಚ್ಚಳ ಕೊಟ್ಟಿದ್ದಲ್ಲದೆ ತಿಂಗಳಿಗೆ ರೂ. 10/-ರಂತೆ ಹೆಚ್ಚಿಗೆ ಕೊಡಲು ಮೇನೇಜುಮೆಂಟು ಒಪ್ಪಿತು. ಅಲ್ಲದೆ 20% ಬೋನಸ್ಸು ಮತ್ತು 5% (Leave allowance) ಇಡೀ ಸಂಪಾದನೆಯ ಮೇಲೆ ಕೊಡಲು ಒಪ್ಪಿದರು. ಕಾರ್ಖಾನೆಯ ಮುಚ್ಚಿದ ಸಮಯದ ಪರಿಹಾರದ ಬಗ್ಗೆ ಮುಂದೆ ಚರ್ಚಿಸಲು ಒಪ್ಪಿದರು,

●

ಚಂದಾ ವಿವರ

ಬಿಡಿಪ್ರತಿ	50 ಪೈಸೆ
6 ತಿಂಗಳಿಗೆ	13 ರೂ.
ಒಂದು ವರ್ಷಕ್ಕೆ	25 ರೂ.

ಬಂಡವಾಳಶಾಹಿ ಪದ್ಧತಿಗೆ ಬಲಿಯಾಗುತ್ತಿರುವ ಭಾರತೀಯ ವೈದ್ಯಪದ್ಧತಿಗಳು

ಇಂದಿನ ವೈದ್ಯಕೀಯ ರಂಗದಲ್ಲಿ ಪಾಶ್ಚಾತ್ಯ ವೈದ್ಯಪದ್ಧತಿಗಳೇ ಹೆಚ್ಚು ಪ್ರಚಲಿತ. ಭಾರತದ ಪುರಾತನ ವೈದ್ಯಪದ್ಧತಿಗಳಾದ ಆಯುರ್ವೇದ, ಸಿದ್ಧ, ಯುನಾನಿ ಹಾಗೂ ಹೋಮಿಯೋಪತಿ ಪದ್ಧತಿಗಳು ಇಂದಿನ ಜನಾಂಗಕ್ಕೆ ಅಪರಿಚಿತವಾಗುತ್ತಿದೆ. ಆಧುನಿಕ ವೈದ್ಯಪದ್ಧತಿಗಳ ಔಷಧಿಗಳಿಂದ ಕೆಲವೊಮ್ಮೆ ವಿರೋಧ ಪರಿಣಾಮಗಳು ಹೊಸರೋಗಗಳು ಉದ್ಭವವಾಗುವುದುಂಟು. ಆದರೆ ದೇಶಿಯ ವೈದ್ಯಪದ್ಧತಿಗಳು ಇದರಿಂದ ಹೊರತು. ದೇಶಿಯ ಪದ್ಧತಿಗಳ ನೈಸರ್ಗಿಕ ಚಿಕಿತ್ಸಾವಿಧಾನ ಹೇರಳ ನೈಸರ್ಗಿಕ ಸಂಪನ್ಮೂಲಗಳನ್ನುಳ್ಳ ಭಾರತದಂತಹ ದೇಶದಲ್ಲಿ ಹೆಚ್ಚು ಮಹತ್ವಪೂರ್ಣ.

ಆದರೆ ಶತಮಾನಗಳ ಕಾಲ ದೇಶದ ಸಂಪತ್ತನ್ನು ಕೊಳ್ಳೆಹೊಡೆದು ಭಾರತೀಯರ ಭಾಷೆ ಸಂಸ್ಕೃತಿ, ಪ್ರಗತಿಗಳನ್ನು ಹತ್ತಿಕ್ಕಿದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ತಮ್ಮ ಆಡಳಿತಾವಧಿಯಲ್ಲಿ ದೇಶಿಯ ವೈದ್ಯಪದ್ಧತಿಗಳ ಬಗ್ಗೆ 'ಮಲತಾಯಿ ಧೋರಣೆ' ತಳೆದು ಆಂಗ್ಲ ವೈದ್ಯಪದ್ಧತಿಗೆ ಹೆಚ್ಚಿನ ಪ್ರೋತ್ಸಾಹ, ಪ್ರಚಾರ ನೀಡಿದರು. ಸ್ವತಂತ್ರ ಭಾರತದ ಸರ್ಕಾರಗಳು ಸಹ ಇದೇ ಧೋರಣೆಯನ್ನು ಅನುಸರಿಸುತ್ತಿವೆ ದೇಶವನ್ನು ಬಂಡವಾಳಶಾಹಿ ಪಥದಲ್ಲಿ ಕೊಂಡೊಯ್ಯುತ್ತಿರುವುದರಿಂದಾಗಿ ವೈದ್ಯಕೀಯ ರಂಗದಲ್ಲಿ ಬಹುರಾಷ್ಟ್ರೀಯ ಡ್ರಗ್ ಕಂಪನಿಗಳು ತಮ್ಮ ಹಿಡಿತ ಸ್ಥಾಪಿಸಿದ್ದು ಪಾಶ್ಚಾತ್ಯ ವೈದ್ಯಪದ್ಧತಿಗಳು ಪ್ರಾಮುಖ್ಯತೆ ಗಳಿಸಲು ಸಾಧ್ಯವಾಯಿತು. ಇದರಿಂದಾಗಿ ದೇಶಿಯ ವೈದ್ಯಪದ್ಧತಿಗಳ ಬೆಳವಣಿಗೆ ತುಳಿಯಲ್ಪಟ್ಟಿದ್ದು ಈ ಪದ್ಧತಿಗಳು ಅವನತಿಯ ಹಾದಿಯಲ್ಲಿವೆ.

ಭಾರತೀಯ ವೈದ್ಯಪದ್ಧತಿಗಳ ಬಗ್ಗೆ ವಿಶೇಷ ಸಂಶೋಧನೆ ನಡೆಸಿ ಜನತೆಗೆ ಈ ವಿಶಿಷ್ಟ ಪದ್ಧತಿಗಳ ಪ್ರಯೋಜನ ದೊರಕಿಸಲು ಸರ್ಕಾರಕ್ಕೆ ಆಸಕ್ತಿಯಿಲ್ಲ. ಭಾರತ ದೇಶದ ಸರ್ಕಾರದ ಬಂಡವಾಳಶಾಹಿ ಮಾರ್ಗಕ್ಕೆ ವಿಭಿನ್ನವಾಗಿ ಸಮಾಜವಾದಿ ಪಥದಲ್ಲಿ ಸಾಗಿ ಪ್ರಗತಿ ಸಾಧಿಸುತ್ತಿರುವ ಚೈನಾ ಸರ್ಕಾರ ಚುಚ್ಚುವಿಕೆಯಿಂದ ರೋಗಗಳನ್ನು ಗುಣಪಡಿಸುವ 'ಅಕ್ಯುಪಂಕ್ಚರ್' ಎಂಬ ಪುರಾತನ ಚೈನೀ ಚಿಕಿತ್ಸಾವಿಧಾನದ ಬಗ್ಗೆ ಸಂಶೋಧನೆ ನಡೆಸಿ ಜಗತ್ತಿನ ಬೆಳಕಿಗೆ ತಂದಿದ್ದು ನಮ್ಮ ಸರ್ಕಾರಗಳಲ್ಲಿ ಅನುಕರಣೀಯವಾಗಿದೆ.

ದೇಶೀಯ ವೈದ್ಯಪದ್ಧತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಏಳು ಆಯುರ್ವೇದ, ಐದು ಹೋಮಿಯೋಪತಿ ಮತ್ತು ಒಂದು ಯುನಾನಿ ಕಾಲೇಜುಗಳಿವೆ ಜನಗಳಿಗೆ ಸಮರ್ಪಕ ಶಿಕ್ಷಣ, ಆರೋಗ್ಯ ಸೌಲಭ್ಯಗಳನ್ನು ಒದಗಿಸುವಲ್ಲಿ ನಮ್ಮ ಸರ್ಕಾರಗಳು ವಿಫಲವಾಗಿದ್ದು ಇಂದು ಈ ರಂಗಗಳು ಉತ್ತಮ ವ್ಯಾಪಾರ ಮಾಧ್ಯಮಗಳಾಗಿವೆ. ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ, ಆಸ್ಪತ್ರೆಗಳಲ್ಲಿ ಕಾಟಾಚಾರದ ಶಿಕ್ಷಣ ಮತ್ತು ಚಿಕಿತ್ಸೆ ನೀಡುತ್ತಿರುವುದು ಸರ್ವವಿದಿತ ಇದರಿಂದಾಗಿ ಖಾಸಗಿ ವಿದ್ಯಾಸಂಸ್ಥೆಗಳು, ಆರೋಗ್ಯಕೇಂದ್ರಗಳಿಗೆ ಬೇಡಿಕೆ ಹೆಚ್ಚಿದ್ದು ಇವುಗಳು ವ್ಯಾಪಾರ ಕೇಂದ್ರಗಳಾಗಿವೆ. ಎಂ.ಬಿ.ಬಿ.ಎಸ್. ಶಿಕ್ಷಣಕ್ಕಾಗಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಸರ್ಕಾರವೇ ನಿಗಧಿಪಡಿಸಿರುವಂತೆ ಒಂದೂಕಾಲುಲಕ್ಷರೂ.ವಂತಿಗೆನೀಡಲು ಅಥವಾ ಬೆಲೆ ಏರಿಕೆಯಂತೆ ಜಿಗಿಯುತ್ತಿರುವ 'ಅರ್ಹತೆಯ ಅಂಕಗಳ ಮಟ್ಟ'ವನ್ನು ಮುಟ್ಟಲಾಗದೆ ನಿರಾಶರಾದ ವಿದ್ಯಾರ್ಥಿಗಳು ದೇಶೀಯ ವೈದ್ಯಪದ್ಧತಿಯ ಕಾಲೇಜುಗಳನ್ನು ಸೇರಿ ಬದಲಿ ವೈದ್ಯಪದವಿಯೊಂದನ್ನು ಪಡೆಯಲು ಪ್ರಯತ್ನಿಸುತ್ತಾರೆ. ಇಲ್ಲಿಯೂ ಪುನಃ ಖಾಸಗಿ ಕಾಲೇಜುಗಳಿಗೆ ಕನಿಷ್ಟ ಹತ್ತುಸಾವಿರರೂ ವಂತಿಗೆ ಸಲ್ಲಿಸಬೇಕು. ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ದೇಶೀಯ ವೈದ್ಯಪದ್ಧತಿಗಳ ಬಗ್ಗೆ ಆಧುನಿಕ, ವೈಜ್ಞಾನಿಕ, ಪ್ರಾಯೋಗಿಕ ವಿಧಾನದ ಬೋಧನೆ ಅಗತ್ಯ. ದೇಶೀಯ ವೈದ್ಯಪದ್ಧತಿಗಳ ಬಗ್ಗೆ ವಿಶೇಷ ಸಂಶೋಧನೆ ನಡೆಸಲು ಸೌಲಭ್ಯಗಳಿಲ್ಲದಿರುವುದರಿಂದ ಇವುಗಳ ಅಭಿವೃದ್ಧಿ ಕಾರ್ಯ ಸ್ಥಗಿತವಾಗಿದೆ. ಮಾತ್ರವಲ್ಲದೆ ಸರ್ಕಾರದ ನಿರ್ಲಕ್ಷ್ಯದಿಂದ ಆಸ್ಪತ್ರೆಗಳು ಪ್ರಾಚೀನ ವೈದ್ಯಕೀಯ ಉಪಕರಣಗಳ ಸಂಗ್ರಹಾಲಯಗಳಾಗುತ್ತಿದ್ದು ರೋಗಿಗಳಿಗೆ ಕೇವಲ ಕಾಟಾಚಾರದ ಚಿಕಿತ್ಸೆ ನೀಡಲಾಗುತ್ತಿದೆ ಚಿಕಿತ್ಸಾ ಉಪಕರಣಗಳು ಔಷಧಿಯ ಪೂರೈಕೆ ಸಮರ್ಪಕವಿಲ್ಲದೆ ರೋಗಿಗಳ ರೋಗಗಳನ್ನು ಗುಣಪಡಿಸುವಲ್ಲಿ ಆಸ್ಪತ್ರೆಗಳು ವಿಫಲವಾಗುತ್ತಿವೆ. ವಿದ್ಯಾಭ್ಯಾಸದ ನಂತರ ಸರ್ಕಾರ ಉದ್ಯೋಗಾವಕಾಶ ನೀಡಲು ವಿಫಲವಾಗಿರುವ ಕಾರಣ ದೇಶೀಯ ವೈದ್ಯಪದ್ಧತಿಯ ಪದವೀಧರರು ತಮ್ಮ ಅಭ್ಯಾಸದ ಖಾಸಗಿ ರಂಗದಲ್ಲಿ ವೈದ್ಯವೃತ್ತಿಗೆ ತೊಡಗಬೇಕಾದಾಗ ಈಗಾಗಲೇ ವೈದ್ಯಕೀಯ ರಂಗದಲ್ಲಿ ಹಿಡಿತ ಸ್ಥಾಪಿಸಿರುವ ಪಾಶ್ಚಾತ್ಯ ವೈದ್ಯಪದ್ಧತಿಗಳೊಡನೆ ಸ್ಪರ್ಧೆ ನಡೆಸಲು ಸಾಧ್ಯವಾಗದೇ ಹೋಗಿದೆ ತಮ್ಮ ಜೀವನ ಮಾರ್ಗಕ್ಕಾಗಿ ಅವರೂ ಸಹ ಪಾಶ್ಚಾತ್ಯ ವೈದ್ಯಪದ್ಧತಿಯಲ್ಲೇ ಚಿಕಿತ್ಸೆ ಪ್ರಾರಂಭಿಸುತ್ತಾರೆ. ಅಲ್ಲದೆ ಇವರಿಗೆ ತಮ್ಮ ವಿದ್ಯಾಭ್ಯಾಸದ ಅವಧಿಯಲ್ಲಿ ದೇಶೀಯ ವೈದ್ಯಪದ್ಧತಿಗಳ ಬಗ್ಗೆ ಸಮರ್ಪಕ ಜ್ಞಾನ ಮತ್ತು ತರಬೇತಿ ಲಭ್ಯವಿಲ್ಲ.

ಈ ಎಲ್ಲಾ ಕಾರಣಗಳಿಂದ ದೇಶೀಯ ವೈದ್ಯಪದ್ಧತಿಗಳ ಬಗ್ಗೆ ಜನತೆಯಲ್ಲಿ ಅವಿಶ್ವಾಸ ಅನಾಸಕ್ತಿ ಇನ್ನೂ ತೀವ್ರವಾಗಿ ಬೆಳೆಯುತ್ತಿವೆ.

ದೇಶೀಯ ವೈದ್ಯಪದ್ಧತಿಗಳ ಬಗ್ಗೆ ವಿಶೇಷ ಸಂಶೋಧನೆ ಕಾಲೇಜುಗಳಲ್ಲಿ ಶಿಕ್ಷಣದ ಗುಣಮಟ್ಟ ಮತ್ತು ಆಸ್ಪತ್ರೆಗಳಲ್ಲಿ ಚಿಕಿತ್ಸೆಯ ಗುಣಮಟ್ಟವನ್ನು ಉತ್ತಮಪಡಿಸುವುದು, ವೈದ್ಯಪದವೀಧರರಿಗೆ ವಿದ್ಯಾಭ್ಯಾಸದ ನಂತರ ಉದ್ಯೋಗದ ಅವಕಾಶಗಳನ್ನು ನೀಡುವ ಮೂಲಕ ಭಾರತೀಯ ವೈದ್ಯಪದ್ಧತಿಗಳ ಪುನರುಜ್ಜೀವನಕಾರ್ಯ ಸಾಧ್ಯ. ಈ ಕಾರ್ಯವನ್ನು ಸರ್ಕಾರ ಅತೀ ಶೀಘ್ರವಾಗಿ ಕೈಗೆತ್ತಿಕೊಳ್ಳಬೇಕಾಗಿದೆ.

ಹೋರಾಟವೇ ದಾರಿ :

ಭಾರತೀಯ ವೈದ್ಯಪದ್ಧತಿಯ ಮತ್ತು ಹೋಮಿಯೋಪತಿ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳ ಬಗ್ಗೆ ನಡೆಸಿದ ದೀರ್ಘ ಹೋರಾಟದ ಪರಿಣಾಮವಾಗಿ 1972ರಲ್ಲಿ ಕರ್ನಾಟಕ ಸರ್ಕಾರವು ಡಾ॥ ಮೇಲುಕೋಟೆ ಸಮಿತಿಯನ್ನು ರಚಿಸಿತು. ಈ ಸಮಿತಿಯು ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸಿದ 1973ರಲ್ಲಿ ಸಲ್ಲಿಸಿದ ವರದಿಯನ್ನು ಸರ್ಕಾರವು ಅಂಗೀಕರಿಸಿತು. ಡಾ॥ ಮೇಲುಕೋಟೆಯವರ ಶಿಫಾರಸ್ಸಿನಂತೆ ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಪದ್ಧತಿಗಳಿಗೆ ಪ್ರತ್ಯೇಕ ಇಲಾಖೆಯೊಂದನ್ನು ರಚಿಸಿದ್ದನ್ನು ಬಿಟ್ಟರೆ ವರದಿಯಲ್ಲಿನ ಮತ್ತಾವುದೇ ಪ್ರಮುಖ ಶಿಫಾರಸ್ಸುಗಳನ್ನು ಸರ್ಕಾರ ಇದುವರೆವಿಗೆ ಜಾರಿ ಮಾಡಿಲ್ಲ.

ಕಳೆದ ಒಂದು ದಶಕದಿಂದಲೂ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುತ್ತಿರುವ ವಿದ್ಯಾರ್ಥಿಗಳ ಕೂಗಿಗೆ ಸರ್ಕಾರ ಕಿವುಡಾಗಿದೆ. ಜನರ ಅಗತ್ಯಗಳನ್ನು ಪೂರೈಸುವ ಸಲುವಾಗಿ ಹಣ ವೆಚ್ಚ ಮಾಡಲು ಸರ್ಕಾರಕ್ಕೆ ಆಸಕ್ತಿಯಿಲ್ಲದಿರುವುದು ಸ್ಪಷ್ಟ. ಭಾರತೀಯ ಸಂಸ್ಕೃತಿಯ ಒಂದು ಭಾಗವಾದ ದೇಶೀಯ ವೈದ್ಯಪದ್ಧತಿಗಳ ಪುನರುಜ್ಜೀವನವಾಗಬೇಕಾದರೆ ಜನತೆಯ ಮೂಲಭೂತ ಅವಶ್ಯಕತೆಗಳಾದ ಶಿಕ್ಷಣ, ಆರೋಗ್ಯ, ವಸತಿ, ಆಹಾರ, ಉದ್ಯೋಗ ಮುಂತಾದವುಗಳನ್ನು ಪೂರೈಸಬಲ್ಲ ಬದಲಿ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವುದೇ ಅಂತಿಮ ಪರಿಹಾರ ಮಾರ್ಗವಾಗಿದ್ದರೂ ಪ್ರಸ್ತುತ ವ್ಯವಸ್ಥೆಯಲ್ಲಿ ಕೆಲವೊಂದು ಸೌಲಭ್ಯಗಳಿಗಾಗಿ ಹೋರಾಟ ಅತ್ಯಗತ್ಯ. ಈ ದೃಷ್ಟಿಯಲ್ಲಿ ಬೆಳಗಾವಿಯ ಹೋಮಿಯೋಪತಿ ಮತ್ತು ಬೆಂಗಳೂರಿನ ಭಾರತೀಯ ವೈದ್ಯಪದ್ಧತಿ ವಿದ್ಯಾರ್ಥಿಗಳ ದಿಟ್ಟ ಹೋರಾಟಗಳು ರಾಜ್ಯದ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾಗಿವೆ. ವಿದ್ಯಾರ್ಥಿಗಳು ತಮ್ಮ ದೀರ್ಘಕಾಲದ ಬೇಡಿಕೆಗಳನ್ನು ಪಡೆಯಲು ರಾಜ್ಯಮಟ್ಟದಲ್ಲಿ ಬಲಿಷ್ಟ ಹೋರಾಟವನ್ನು ಸಂಘಟಿಸುವುದು ಅಗತ್ಯವಾಗಿದೆ.

●

ರಾಯಚೂರಿನಲ್ಲಿ ಮೇ ದಿನಾಚರಣೆ

ರಾಯಚೂರು ನಗರದ ಇತಿಹಾಸದಲ್ಲಿ ಮೊದಲ ಬಾರಿಗೆ ಎಲ್ಲಾ ಕಾರ್ಮಿಕ ಸಂಘಟನೆಗಳು ಒಂದಾಗಿ ಸಮನ್ವಯ ಸಮಿತಿಯ ಹೆಸರಿನಲ್ಲಿ ಮೇ ದಿನಾಚರಣೆಯನ್ನು ಆಚರಿಸಿದವು. ಇದಕ್ಕೆ ಮೊದಲು ಮೇ ದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸಲು 5000 ಕರಪತ್ರಗಳನ್ನು ನಾಗರೀಕರಿಗೆ ಹಂಚಲಾಯಿತು. ಆ ದಿನ ಸಂಬಳ ಸಹಿತ ರಜಾ ಘೋಷಿಸಲು ಮಾಲೀಕರಿಗೆ ಮನವಿ ಮಾಡಲಾಯಿತು. ಮೇ ದಿನದ ಮಹತ್ವವನ್ನು ತಿಳಿಸಲು ಕಾರ್ಖಾನೆಗಳ ಮುಂದೆ ಹಾಗೂ ಬೀದಿ ಬದಿಯಲ್ಲಿ 21 ಸಭೆಗಳನ್ನು ನಡೆಸಲಾಯಿತು.

ರಸ್ತೆಸಾರಿಗೆ ಕಾರ್ಮಿಕರ ಸಂಘ (ಎ. ಐ. ಟಿ. ಯು. ಸಿ), ಗಂಜ ಹಮಾಲರು (ಜನತಾ), ರಿಕ್ಷಾ ಚಾಲಕರು, ಲೋಕೋಪಯೋಗಿ ಇಲಾಖೆಯ ಕಾರ್ಮಿಕರು, ಕೋ-ಆಪರೇಟಿವ್ ಸ್ಪಿನ್ನಿಂಗ್ ಮಿಲ್ಸ್ (ಸಿ. ಐ. ಟಿ. ಯು.), ರೈಲ್ವೆ ಕಾರ್ಮಿಕರು ಹಾಗೂ ಇನ್ನಿತರ ಕಾರ್ಮಿಕರು ಕೆಂಬಾವುಟದಡಿಯಲ್ಲಿ ತಂಡ, ತಂಡವಾಗಿ ಬಂದು ಸೇರಿದ ಕಾರ್ಮಿಕರು ನಗರದಲ್ಲಿ ಎರಡು ಗಂಟೆಗಳ ಕಾಲ ಮೆರವಣಿಗೆ ನಡೆಸಿ ಮಹಿಳಾ ಸಮಾಜದ ಬಳಿ ಮುಕ್ತಾಯವಾಯಿತು.

ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾಂ. ವೀರಭದ್ರಪ್ಪ, ಚಂದ್ರಶೇಖರ ಬಾಳೆ, ಖಮ್ರುದ್ದೀನ್, ಪುರುಷೋತ್ತಮ ಕಲಾಲಬಂಡಿ ಹಾಗೂ ಪ್ರಹ್ಲಾದ್ ಮಾತನಾಡಿದರು. ಶ್ರೀ ನಾಗಪ್ಪನವರು ಅಧ್ಯಕ್ಷತೆ ವಹಿಸಿದ್ದರು.

○

ಬೆಳಗಾವಿಯಲ್ಲಿ ಹೋರಾಟ ಮುಂದರಿಯಲೇಬೇಕಾಗಿದೆ

ಬೆಳಗಾವಿಯ ಇಂಡಾಲ್ ಫ್ಯಾಕ್ಟರಿಯನ್ನು ಮೇನೇಜುಮೆಂಟಿನವರು ಕಾನೂನು ಬಾಹಿರವಾಗಿ ಬೀಗಮುದ್ರೆ ಸಾರಿ ಉಂಟಾದ ಸಮಸ್ಯೆಯ ಪರಿಹಾರದ ಬಗ್ಗೆ ರಾಜ್ಯ ಲೇಬರ್ ಕಮಿಷನರವರು ಮೇ 17ರಂದು ಮಾತುಕತೆಗೆ ಕರೆದಿದ್ದರು. ಒಂದೆರಡು ಸುತ್ತಿನ ಮಾತುಕತೆ ನಡೆದು ಕೊನೆಗೆ 27ಕ್ಕೆ ಇದನ್ನು ಮುಂದೂಡಲಾಗಿತ್ತು. ತಾ 27ರಂದು ಮತ್ತೆ ಮಾತುಕತೆ ನಡೆಯಿತು. ಮೇನೇಜುಮೆಂಟಿನ ಹಠಮಾರಿ ನಿಲುವಿಯಿಂದಲಾಗಿ, ಅಮಾನತುಗೊಳಿಸಿದ ಕಾರ್ಮಿಕರನ್ನು ಹಿಂತೆಗೆದುಕೊಳ್ಳಲು ಒಪ್ಪದೆ ಇದ್ದುದರಿಂದ ಮಾತುಕತೆ ಮುರಿದುಬಿದ್ದಿದೆ. ಮೇನೇಜುಮೆಂಟಿನವರ ವರ್ತನೆಯನ್ನು ನೋಡಿದಲ್ಲಿ ಇನ್ನೂ ಒಂದೆರಡು ತಿಂಗಳ ಕಾಲ ಬೀಗಮುದ್ರೆ ಇರುವಂತೆ ಮಾಡಿ, ವಿದ್ಯುಚ್ಛಕ್ತಿ ಕೊರತೆಯಿಂದಲಾಗಿ ಕೆಲಸ ಕಳಕೊಳ್ಳುವ ಕಾರ್ಮಿಕರಿಗೆ ಲೇ ಆಫ್ ವೇತನ ಕೊಡುವುದನ್ನು ತಪ್ಪಿಸುವ ಯತ್ನ ಎಂದು ಸ್ಪಷ್ಟವಾಗುತ್ತದೆ. ಮಾಲಕರ ಈ ಕುತಂತ್ರದ ವಿರುದ್ಧ ಐಕ್ಯ ಮತ್ತು ಸಂಘಟಿತ ಹೋರಾಟವನ್ನು ಬಲಗೊಳಿಸಲು ಇಂಡಾಲ್ ಕಾರ್ಮಿಕರು ತೀರ್ಮಾನಿಸಿದ್ದಾರೆ.

ಹಾಗೆಯೇ ಕನಿಷ್ಠ ವೇತನ ಮತ್ತು ಇತರ ಸವಲತ್ತುಗಳ ಬಗ್ಗೆ ಹೋರಾಡುತ್ತಲಿರುವ ಪವರ್‌ಲೂಮ್ ಕಾರ್ಮಿಕರು ತಾ. 19ರಿಂದ ಮಾಲಕರು ಬೀಗಮುದ್ರೆ ಸಾರಿರುವುದರಿಂದ ಇನ್ನೂ ಕಷ್ಟಕ್ಕೀಡಾಗಿದ್ದಾರೆ. ಬೀಗಮುದ್ರೆಯನ್ನು ವಿರೋಧಿಸಿ ಪ್ರತಿಭಟಿಸಿದ ಸುಮಾರು ಇನ್ನೂರಮೂವತ್ತು ನಾಲ್ಕು ಕಾರ್ಮಿಕರನ್ನು (ಅವರ ಮುಖಂಡರೂ ಸೇರಿದಂತೆ) ಬಂಧಿಸಲಾಗಿದೆ. ಬಂಧನಕ್ಕೊಳಗಾದವರು ಜಾಮೀನು ಕೊಟ್ಟು ಹೊರಬರಲು ನಿರಾಕರಿಸಿ, ಬಂಧನದಲ್ಲೇ ಇರುವರು. ಬೆಳಗಾವಿಯ ಸುಮಾರು 20,000 ಪವರ್‌ಲೂಮ್ ಕಾರ್ಮಿಕರು ಏನೇ ಆದರೂ ತಮ್ಮ ಒಗ್ಗಟ್ಟನ್ನು ಬಲಪಡಿಸಿ ಹೋರಾಡಲು ಮುಂದಾಗಿದ್ದಾರೆ.

ಕಳೆದ ಒಂದೆರಡು ತಿಂಗಳುಗಳಿಂದ ಹೋರಾಟದ ದಾರಿಯಲ್ಲಿರುವ ಬೆಳಗಾವಿಯ ಹೋಮಿಯೋಪಥಿಕ್ ವಿದ್ಯಾರ್ಥಿಗಳಿಗೆ ಇತ್ತೀಚೆಗೆ ರಾಜ್ಯ ಆರೋಗ್ಯ ಸಚಿವರು ಭರವಸೆ ಇತ್ತಿದ್ದರೂ, ಈ ತನಕ ಏನೇನೂ ಆಗಿಲ್ಲ; ಆರೋಗ್ಯ ಸಚಿವರು ವಿದ್ಯಾರ್ಥಿಗಳ ಬೇಡಿಕೆಗಳ ಬಗ್ಗೆ ಪರಿಶೀಲಿಸಬಹುದೆಂದೂ, ಕಾಲೇಜು ನೌಕರರ ಬೇಡಿಕೆಗಳ ಬಗ್ಗೆ ಏನೂ ಮಾಡುವಂತಿಲ್ಲವೆಂದೂ ಹೇಳಿದ ಸುದ್ದಿಯಿದೆ. ವಿದ್ಯಾರ್ಥಿಗಳು ಮತ್ತೆ ಆಮರಣ ಉಪವಾಸ ಪ್ರಾರಂಭಿಸಿ ಹೋರಾಟವನ್ನು ಬಲಗೊಳಿಸುವ ನಿರ್ಧಾರ ಮಾಡಿರುವರು.

ಇಂಡಾಲ್ ಕಾರ್ಮಿಕರು, ಪವರ್‌ಲೂಮ್ ಕಾರ್ಮಿಕರು ಮತ್ತು ವಿದ್ಯಾರ್ಥಿಗಳು ತಮ್ಮಲ್ಲಿರುವ ಐಕ್ಯತೆಯನ್ನು ಇನ್ನೂ ಬಲಪಡಿಸಿ, ಪರಸ್ಪರ ಸಹಕಾರದಿಂದ ಹೋರಾಟವನ್ನು ಬಲಪಡಿಸುತ್ತಲಿದ್ದಾರೆ. ಉತ್ತರ ಕರ್ನಾಟಕದ ಎಲ್ಲಾ ಕಾರ್ಮಿಕ ಸಂಘಟನೆಗಳ ಸಮಾವೇಶವನ್ನು ಕರೆದು, ಬೆಳಗಾವಿಯ ಕಾರ್ಮಿಕ-ವಿದ್ಯಾರ್ಥಿಗಳ ಹೋರಾಟಕ್ಕೆ ಸೌಹಾರ್ದ ಬೆಂಬಲ ಕಾರ್ಯಾಚರಣೆ ನಡೆಸುವ ಯೋಜನೆ ಇದೆ.

●

ಅಸ್ತವ್ಯಸ್ತ ಆಡಳಿತ

(ಒಂದನೇ ಪುಟದಿಂದ)

ಇದು ಶ್ರೀಮತಿಗಾಂಧಿಯವರ ಆಡಳಿತ ವೈಖರಿಯ ಕೇವಲ ಒಂದು ಮುಖ ಮಾತ್ರ. ಮತ್ತೊಂದು ಕರಾಳ ಮುಖವೆಂದರೆ, ಅಧಿಕಾರಸ್ಥ ಪಕ್ಷದ ಒಲವು ಗಳಿಸದ ಸರಕಾರಿ ನೌಕರರ ಮೇಲೆ ನಡೆಯುತ್ತಿರುವ ಕ್ರೂರ ದಬ್ಬಾಳಿಕೆ.

ಸಿ.ಬಿ.ಐ.ನ ಮಾಜೀ ನಿರ್ದೇಶಕ ಎನ್. ಕೆ ಸಿಂಗ್‌ರವರನ್ನು ಬಂಧಿಸಿದ್ದಲ್ಲದೆ ತುಚ್ಛರೀತಿಯಲ್ಲಿ ಅವಮಾನ ಮಾಡಲಾಯಿತು. ಷಾ ಆಯೋಗದ ಜೊತೆ ಕೆಲಸಮಾಡಿದ ಪೋಲೀಸ್ ಅಧಿಕಾರಿ ಆರ್.ಸಿ. ಶರ್ಮಾರವರನ್ನು ಸೇವೆಯಿಂದ ಸಸ್ಪೆಂಡ್ ಮಾಡಿದ್ದಲ್ಲದೆ ಕೆಳದರ್ಜೆ ಅಧಿಕಾರಿಯಾಗಿ ಹಿಂಬಡ್ತಿ ನೀಡಿದ್ದಾರೆ. ಸಂಜಯಗಾಂಧಿ ಭಕ್ತ ತುರ್ತುಪರಿಸ್ಥಿತಿಯ ಕುಖ್ಯಾತ ಅಪರಾಧಿ ಹಾಗೂ ಸದ್ಯದ ದೆಹಲಿ ಪೋಲೀಸ್ ಕಮಿಷನರ್ ಪಿ ಎಸ್. ಭಿಂಡರ್‌ರವರಿಗೆ ಶರ್ಮಾರವರ ಮೇಲೆ ಸಿಟ್ಟು. ಏಕೆಂದರೆ ಜಿ. ಸಿ ಷಾರವರನ್ನು ಸುಳ್ಳು ಮೊಕದ್ದಮೆಯಲ್ಲಿ ಸಿಕ್ಕಿಸಲು ಶರ್ಮಾರವರು ಸುಳ್ಳು ಸಾಕ್ಷಿ ಮತ್ತು ಹೇಳಿಕೆಗಳನ್ನು ನೀಡುವಂತೆ ಭಿಂಡರ್‌ರವರು ಅಧಿಕಾರಕ್ಕೆ ಬಂದ ತಕ್ಷಣ ಆದೇಶ ನೀಡಿದರು. ಆದೇಶವಂತೆ ನಡೆಯಲು ಒಪ್ಪದ ಪೋಲೀಸ್ ಅಧಿಕಾರಿ ಶರ್ಮಾರವರು ಯಾವ ವೇಳೆಯಲ್ಲಿ ದಸ್ತಗಿರಿಯಾಗುತ್ತದೋ ಎಂಬ ಹೆದರಿಕೆಯಿಂದ ದೆಹಲಿ ಹೈಕೋರ್ಟಿನಲ್ಲಿ ನಿರೀಕ್ಷಣಾ ಜಾಮೀನನ್ನು ಮುಂಜಾಗ್ರತೆ ಕ್ರಮವಾಗಿ ಪಡೆದುಕೊಂಡಿದ್ದಾರೆ.

ರಾಜಕೀಯ ಸೇಡಿನ ಕ್ರಮವಾಗಿ ಪ್ರಾರಂಭವಾಗಿರುವ ವಜಾ, ವರ್ಗಗಳಿಂದಾಗಿ ಕೇಂದ್ರ ಸರಕಾರದ ನೌಕರರು ಭಯದ ವಾತಾವರಣದಲ್ಲಿ ಕೆಲಸ ಮಾಡಬೇಕಾಗಿದೆ. ಆಳುವ ಪಕ್ಷಕ್ಕೆ ನಿಷ್ಠರಾದವರಿಗೆ ಮಾತ್ರ ಬಡ್ತಿಗಳು, ಉಳಿದವರಿಗೆ ಸದಾ ವರ್ಗಾವಣೆ, ವಜಾ, ಶಿಸ್ತುಕ್ರಮದ ಬೆದರಿಕೆಗಳು. ಇದರಿಂದಾಗಿ ಇಡೀ ಆಡಳಿತ ವ್ಯವಸ್ಥೆ ಅಧಿಕಾರಿಗಳು ಅತೃಪ್ತಿ, ಅಸಮಾಧಾನಗಳಿಂದ ಕೆಲಸವನ್ನೇ ನಿಲ್ಲಿಸಿದ್ದಾರೆ.

ದೆಹಲಿ ಪೋಲೀಸರಲ್ಲಿ ಶೇಕಡ 75ರಷ್ಟು ಅಧಿಕಾರಿಗಳು ವರ್ಗವಾಗಿದ್ದಾರೆ. ಹನ್ನೆರಡು ಅಸಿಸ್ಟೆಂಟ್ ಕಮಿಷನರ್‌ಗಳ ಪೈಕಿ ಹತ್ತು ಜನರನ್ನೂ ಬದಲಾಯಿಸಲಾಗಿದೆ. ಆರು ಜನ ಡೆಪ್ಯುಟಿ ಕಮೀಷನರುಗಳ ಪೈಕಿ ಮೂರು ಜನರ ಸ್ಥಾನಪಲ್ಲಟವಾಗಿದೆ. ಇದೆಲ್ಲವೂ ಭಿಂಡರ್ ಅಧಿಕಾರದ ಕೆಲವು ಉದಾಹರಣೆಗಳು.

ಶ್ರೀಮತಿ ಗಾಂಧಿಯವರು ತಮ್ಮ ಕೈಗೆ ಅಧಿಕಾರ ಪಡೆದುಕೊಂಡ ತಕ್ಷಣ ಸಿ. ಬಿ. ಐ. ಹಾಗೂ ಗೂಢಚರ್ಯೆ ವಿಭಾಗದ ಡೈರೆಕ್ಟರುಗಳ ಸ್ಥಾನಗಳನ್ನು ಬದಲಾಯಿಸಲಾಯಿತು. ಇಂದಿರಾಗಾಂಧಿಯವರ ವಿರುದ್ಧ ಹೂಡಲಾಗಿದ್ದ ವಿವಿಧ ವಿಚಾರಣಾ ಆಯೋಗಗಳ ಜೊತೆ ಕೆಲಸ ಮಾಡುತ್ತಿದ್ದ ಆರು ಜನ ಡಿ. ಐ. ಜಿ. ಗಳನ್ನು ಅವರವರ ರಾಜ್ಯಕ್ಕೆ ಹಳೆಯ ಸ್ಥಾನಗಳಿಗೆ ಕಳಿಸಲಾಗಿದೆ.

ಆಡಳಿತ ಯಂತ್ರದಲ್ಲಿರುವ ಸರಕಾರಿ ಅಧಿಕಾರಿಗಳು ಎಂತಹ ಭಯಾನಕ ವಾತಾವರಣದಲ್ಲಿ ಕೆಲಸ ಮಾಡುತ್ತಿದ್ದಾರೆಂದರೆ, ತುರ್ತುಪರಿಸ್ಥಿತಿ ಮತ್ತೆ ವಾಪಸು ಬಂದಿರುವಂತೆ ಭಾಸವಾಗುತ್ತಿದೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಹೆಚ್. ಎನ್. ಬಹುಗುಣರವರು ಪಕ್ಷಕ್ಕೆ ಹಾಗೂ ಸಂಸತ್ತಿಗೆ ರಾಜೀನಾಮೆ ನೀಡುವ ಸಂದರ್ಭದಲ್ಲಿ "ಕಳೆದ ನಾಲ್ಕು ತಿಂಗಳಲ್ಲಿ ಸರ್ಕಾರಿ ಯಂತ್ರದಲ್ಲಿ ನಡೆಯುತ್ತಿರುವ ಅತಿಯಾದ ಹಸ್ತಕ್ಷೇಪ ನನ್ನನ್ನು ಅಸ್ವಸ್ಥನನ್ನಾಗಿ ಮಾಡಿದೆ. ಕಳೆದ ಸರ್ಕಾರದ ಆಜ್ಞೆಗಳನ್ನು ನೆರವೇರಿಸಿದ್ದಕ್ಕಾಗಿ ಅಧಿಕಾರಿಗಳಿಗೆ ನೀಡುತ್ತಿರುವ ನಾನಾ ತೊಂದರೆಗಳ ಬಗ್ಗೆ ತುಂಬಾ ದೂರುಗಳು ಬಂದಿವೆ. ಪರಿಸ್ಥಿತಿ ಈ ರೀತಿಯಾಗಿ ಮುಂದುವರಿದರೆ ಆಡಳಿತ ವ್ಯವಸ್ಥೆ ಅಸ್ತವ್ಯಸ್ತ ಆಗುವುದರಲ್ಲಿ ಸಂದೇಹವಿಲ್ಲ, ಏಕೆಂದರೆ ಪ್ರಜಾತಂತ್ರದಲ್ಲಿ ಸರ್ಕಾರಗಳು ಬದಲಾಗುವುದು ಸ್ವಾಭಾವಿಕ".

ಬಹುಗುಣರ ಆರೋಪವನ್ನು ನಿರಾಕರಿಸಲು ಪ್ರಯತ್ನಿಸಿದ ಶ್ರೀಮತಿ ಗಾಂಧಿ, ಬೃಹತ್ ಪ್ರಮಾಣದ ವರ್ಗಗಳು ಆಗಿರುವುದು ನಿಜವೆಂದು ಒಪ್ಪಬೇಕಾಯಿತು. ಅವರೇ ಹೇಳಿದಂತೆ "ವ್ಯಕ್ತಿಗಳನ್ನು ಒಂದು ಊರಿನಿಂದ ಮತ್ತೊಂದಕ್ಕೆ ವರ್ಗಮಾಡುವುದನ್ನು ವ್ಯಯಕ್ತಿಕವಾಗಿ ನಾನು ಇಷ್ಟಪಡುವುದಿಲ್ಲ" ಎಂದಿದ್ದಾರೆ. ಇದು ಹೌದಾದರೆ ಅವರು ಇಷ್ಟಪಡುವುದಿಲ್ಲವಾದರೆ ಇಷ್ಟಪಡುವವರು ಯಾರು? ಇವರು ಮಾತ್ರರೂ ಅಲ್ಲ ಎಲ್ಲಾ ವಿಷಯಗಳಲ್ಲಿಯೂ ಅಂತಿಮ ನಿರ್ಧಾರ ಕೈಗೊಳ್ಳುವ ಸಂಜಯ ಗಾಂಧಿ ಮತ್ತವನ ದುಷ್ಟಕೂಟದ ಸದಸ್ಯರು. ●

....ಹತ್ತನೆಯ ವಾರ್ಷಿಕೋತ್ಸವ

(2ನೇ ಪುಟದಿಂದ)

ಬಂದು ಕಾರ್ಯದರ್ಶಿ ಕಾಂ. ಕಮಲ್ ಸರ್ಕಾರ್‌ರವರನ್ನು ಕಳುಹಿಸಿಕೊಡಲಾಗಿದೆ.

ಸಿ.ಐ.ಟಿ.ಯು. ಮುಖಂಡರು ಹಿಂದೆ ಇದ್ದಂತೆ ಲೋಕಸಭೆ ಮತ್ತು ರಾಜ್ಯಸಭೆಗಳ ಸದಸ್ಯರಾಗಿರುವುದು ಮಾತ್ರವಲ್ಲದೆ ಪಶ್ಚಿಮ ಬಂಗಾಳ, ತ್ರಿಪುರಗಳ ವಾಮರಂಗಸರ್ಕಾರಗಳಲ್ಲೂ ಕೇರಳದ ಎಡ ಮತ್ತು ಪ್ರಜಾಪ್ರಭುತ್ವ ಸರ್ಕಾರದಲ್ಲೂ ಮಂತ್ರಿಗಳಾಗಿದ್ದಾರೆ. ಈ ಸರ್ಕಾರಗಳು ನಮ್ಮ ದೇಶದ ಆಳುವವರ್ಗಗಳ ರಾಜಕೀಯ ಪಕ್ಷಗಳ ಆಳ್ವಿಕೆಗೆ ಮತ್ತು ಧೋರಣೆಗಳಿಗೆ ಒಂದು ಪರ್ಯಾಯವನ್ನು ತೋರಿಸಿವೆ ಈ ಸರ್ಕಾರಗಳ ಸಾಧನೆಗಳು ಎಲ್ಲಾ ಕಾರ್ಮಿಕರೂ ಮೆಚ್ಚಿಕೊಳ್ಳುವಂತಹವು.

ಆರ್ಥಿಕವಾದದ ವಿರುದ್ಧ ಹೋರಾಟ ಸೌಹಾರ್ದ ಕಾರ್ಯಾಚರಣೆ, ಪ್ರಜಾಪ್ರಭುತ್ವ ರೀತಿಯಲ್ಲಿ ಕಾರ್ಮಿಕ ಸಂಘಗಳನ್ನು ನಡೆಸುವುದು, ತಿಳುವಳಿಕೆಯನ್ನು ಹೆಚ್ಚಿಸುವುದು ಈ ದಿಸೆಗಳಲ್ಲಿ ಸಿ.ಐ.ಟಿ.ಯು. ಇನ್ನೂ ಸಾಧಿಸಬೇಕಾಗಿರುವುದು ಬಹಳಷ್ಟಿದೆ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ, ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರೀಕ ಸ್ವಾತಂತ್ರ್ಯಗಳ ರಕ್ಷಣೆಗಾಗಿ, ವಾಮರಂಗ ಸರ್ಕಾರಗಳ ರಕ್ಷಣೆಗಾಗಿ, ಕಾಂಗ್ರೆಸ್ ಸರ್ಕಾರಗಳ ಮತ್ತು ಬಂಡವಾಳಗಾರರ ಎಲ್ಲಾ ದಾಳಿ ದಬ್ಬಾಳಿಕೆಗಳ ವಿರುದ್ಧ ಸೆಣಸಲು ವಿಶಾಲ ಕಾರ್ಮಿಕ ಐಕ್ಯತೆಯ ವಿನಹ ಬೇರೆಯ ಅಸ್ತ್ರವಿಲ್ಲ. ಈ ದಿಶೆಯಲ್ಲಿ ಮಾಡಬೇಕಾದದು ಸಾಕಷ್ಟಿದೆ. ವಿಶಾಲವಾದ ಚಳುವಳಿ-ಹೋರಾಟಗಳನ್ನು ಸಂಘಟಿಸಲು, ಸಂಘಟನೆಯನ್ನು ವಿಸ್ತರಿಸಿ ಬಲಪಡಿಸಲು ಈ ಸಂದರ್ಭದಲ್ಲಿ ನಾವೆಲ್ಲರೂ ಪಣತೊಡೋಣ. ●

ಒಂಭತ್ತು ವಿಧಾನಸಭೆಗಳಿಗೆ ಸಿ.ಪಿ.ಐ(ಎಂ) ಅಭ್ಯರ್ಥಿಗಳು

ಮೇ ಕೊನೆಯ ವಾರದಲ್ಲಿ ದೇಶದ ಒಂಭತ್ತು ವಿಧಾನಸಭೆಗಳಿಗೆ ಚುನಾವಣೆಗಳು ನಡೆಯಲಿವೆ. ಐದು ವರ್ಷದ ಅವಧಿಗಾಗಿ ಆಯ್ಕೆಯಾಗುವ ವಿಧಾನಸಭೆ, ಸಂಸತ್ತುಗಳ ಆಯುಷ್ಯವನ್ನು ತುರ್ತುಪರಿಸ್ಥಿತಿ ಸಮಯದಲ್ಲಿ ಆರು ವರ್ಷಕ್ಕೆ ಏರಿಸಿದ ಶ್ರೀಮತಿ ಇಂದಿರಾ ಗಾಂಧಿಯವರು, ಲೋಕಸಭಾ ಚುನಾವಣೆಗಳಲ್ಲಿ ತಮಗೆ ಸಿಕ್ಕಿದ ಜಯದಿಂದಾಗಿ ಏಕಪಕ್ಷದ ಸರ್ವಾಧಿಕಾರವನ್ನು ಸ್ಥಾಪಿಸುವ ಉದ್ದೇಶದಿಂದ ಯಾವ ಕಾರಣವನ್ನೂ ನೀಡದೆ ಒಂಭತ್ತು ವಿಧಾನಸಭೆಗಳನ್ನೂ ವಿಸರ್ಜಿಸಿದ್ದಾರೆ. ಇನ್ನೂ ಅವಧಿ ಇರುವಾಗಲೇ ವಿಸರ್ಜನೆಗೊಂಡ ವಿಧಾನಸಭೆಗಳಿಗೆ ಮಧ್ಯಂತರ ಚುನಾವಣೆಗಳನ್ನ ಘೋಷಿಸಿದ್ದಾರೆ. ಇದರಿಂದಾಗಿ ಭಾರತದ ಬಡಜನತೆ 30 ಕೋಟಿ ರೂಪಾಯಿಗಳ ಭಾರವನ್ನು ಸಹಿಸಬೇಕಾಗಿದೆ.

ಈ ಒಂಭತ್ತು ವಿಧಾನಸಭೆಗಳಿಗೆ ನಡೆಯುವ ಚುನಾವಣೆಯಲ್ಲಿ ರಾಷ್ಟ್ರವ್ಯಾಪ್ತಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯರಂಗ ತರಬೇಕೆಂಬ ಸಿ.ಪಿ.ಐ(ಎಂ)ನ ಉದ್ದೇಶ ಉಳಿದ ಪಕ್ಷಗಳ ಅಸಹಕಾರದಿಂದ ಯಶಸ್ವಿಯಾಗಿಲ್ಲ. ಆದರೂ ಬಹಳಷ್ಟು ರಾಜ್ಯಗಳಲ್ಲಿ ಸಿ.ಪಿ.ಐ. ಮತ್ತು ಸಿ.ಪಿ.ಐ(ಎಂ) ಜೊತೆಯಾಗಿ ಸ್ಪರ್ಧಿಸುತ್ತಿರುವುದು ಈ ಚುನಾವಣೆಗಳ ವೈಶಿಷ್ಟ್ಯ. ಮಹಾರಾಷ್ಟ್ರದಲ್ಲಿ ಪ್ರಗತಿಪರರಂಗವನ್ನು ರಚಿಸಲು ಸಾಧ್ಯವಾಗಿದೆ. ತಮಿಳುನಾಡಿನಲ್ಲಿ ಅಣ್ಣಾ ಡಿ.ಎಂ.ಕೆ., ಸಿ.ಪಿ.ಐ., ಸಿ.ಪಿ.ಐ(ಎಂ)ಗಳ ಮೈತ್ರಿಕೂಟ, ಅದೇ ರೀತಿ ಅಕಾಲಿಗಳ ಜೊತೆ ಪಂಜಾಬಿನಲ್ಲಿ ಎರಡೂ ಕಮ್ಯುನಿಸ್ಟ್ ಪಕ್ಷಗಳ ಹೊಂದಾಣಿಕೆ, ಹಾಗೂ ಬಿಹಾರಿನಲ್ಲಿ ಎಡಪಕ್ಷಗಳೆಲ್ಲಾ ಒಂದಾಗಿ ಮೂರನೇ ಎರಡು ಭಾಗಕ್ಕೆ ಸ್ಪರ್ಧಿಸಿರುವುದು ಚುನಾವಣಾ ಪರಿಣಾಮಗಳ ಬಗ್ಗೆ ಕುತೂಹಲ ಬೆಳೆಯುವಂತೆ ಮಾಡಿದೆ. ಕಾಂಗ್ರೆಗೆ ಕೆಲವು ರಾಜ್ಯಗಳಲ್ಲಿಯಾದರೂ ಬಲವಾದ ಪೆಟ್ಟು ಸಿಗುವ ಸಾಧ್ಯತೆಯಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಮಹಾರಾಷ್ಟ್ರದಲ್ಲಿ ಹತ್ತು ಸ್ಥಾನಗಳಿಗೆ, ಬಿಹಾರದಲ್ಲಿ ಇಪ್ಪತ್ತೇಳು ಸ್ಥಾನಗಳಿಗೆ, ಮಧ್ಯಪ್ರದೇಶದಲ್ಲಿ ಒಂಭತ್ತು ಸ್ಥಾನಗಳಿಗೆ, ಪಂಜಾಬಿನಲ್ಲಿ ಹದಿಮೂರು ಸ್ಥಾನಗಳಿಗೆ, ರಾಜಾಸ್ಥಾನದಲ್ಲಿ ಹದಿನಾರು ಸ್ಥಾನಗಳಿಗೆ, ಉತ್ತರಪ್ರದೇಶದಲ್ಲಿ ಹದಿನೆಂಟು ಸ್ಥಾನಗಳಿಗೆ, ತಮಿಳುನಾಡಿನಲ್ಲಿ ಹದಿನಾರು ಹಾಗೂ ಒರಿಸ್ಸಾದಲ್ಲಿ ಹದಿನಾಲ್ಕು ಸ್ಥಾನಗಳಿಗೆ ಸ್ಪರ್ಧಿಸಲಿದೆ.

ಚುನಾವಣಾ ಪ್ರಚಾರದ ಹೊಣೆಯನ್ನು ಕಾಂ. ಜ್ಯೋತಿಬಸು, ಕಾಂ. ಇ. ಕೆ. ನಯನಾರ್, ಕಾಂ. ನೃಪೇನ್ ಚಕ್ರವರ್ತಿ, ಹಾಗೂ ಇತರೆ ಪೊಲಿಟ್ ಬ್ಯೂರೋ ಸದಸ್ಯರು ವಹಿಸಿದ್ದಾರೆ. ●

ಭದ್ರ ಸರಕಾರದ ಅನಿಶ್ಚಿತತೆ

(ಒಂದನೇ ಪುಟದಿಂದ)

ಕಾಂಗ್ರೆ ಸರಕಾರ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಂದಿನಿಂದಲೂ ಜನತೆಯ ಸಮಸ್ಯೆಗಳ ಪರಿಹಾರ ಮಾಡುವತ್ತ ಗಮನಹರಿಸುವ ಬದಲು, ದುಡಿಯುವ ಜನತೆಯ ಮೇಲೆ ನಡೆಯುವ ದಾಳಿ ದಬ್ಬಾಳಿಕೆಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ, ಕಾರ್ಮಿಕರ ಸಂಘಟನಾ ಹಕ್ಕುಗಳನ್ನೇ ಕಸಿಯುವ ಯತ್ನ ನಡೆದಿದೆ ಚಿಕ್ಕಮಗಳೂರಿನ ಸಂಸೆ ಟೀ ಎಸ್ಟೇಟಿನಲ್ಲಿ ಕಾರ್ಮಿಕರ ಮೇಲೆ ಪೋಲೀಸರು ನಡೆಸಿದ ಅಮಾನುಷ ದಾಳಿ, ಬೆಂಗಳೂರಿನಲ್ಲಿ ಕಾರ್ಮಿಕ ಮುಂದಾಳುಗಳನ್ನೇ ಗಡೀಪಾರು ಮಾಡುವ ಕ್ರಮ, ತಾತಗುಣಿ ಕಾರ್ಮಿಕರಿಗೆ ನ್ಯಾಯ ಒದಗಿಸುವ ಬದಲು ಅವರ ಬಂಧನ, ಬೆಳಗಾವಿಯಲ್ಲಿ ನೂರಾರು ಕಾರ್ಮಿಕರ ಬಂಧನ, ಇವೆಲ್ಲಾ ನೋಡಿದರೆ ರಾಜ್ಯದ ಸರಕಾರ ಯಾರಪರವಾಗಿದೆ ಎಂಬುದು ಸ್ಪಷ್ಟ.

ಕಾಂಗ್ರೆ ಸರಕಾರವು ಬೇರೆಬೇರೆ ಇಲಾಖೆಗಳ ಮೂಲಕ ಜನರ ಸಮಸ್ಯೆಗಳ ಪರಿಹಾರದತ್ತ ಕಾರ್ಯೋನ್ಮುಖವಾಗಿಲ್ಲವಾದರೂ, ಪೋಲೀಸು ಇಲಾಖೆಯನ್ನು ಭೂಮಾಲಕ-ಬಂಡವಾಳಗಾರರ ಪರವಾಗಿ ಚುರುಕಿನಿಂದ ಕಾರ್ಯೋನ್ಮುಖವನ್ನಾಗುವಂತೆ ಮಾಡಿದೆ.

ರಾಜ್ಯ ಮುಖ್ಯಮಂತ್ರಿಯವರೇ ಹೇಳಿದ ಪ್ರಕಾರ ಅವರಿಗೆ ಇಂದಿರಾ ಮತ್ತು ಸಂಜಯರ ಆಶೀರ್ವಾದ ಇದೆಯೆಂದೂ, ಅವರು ಇಂದಿರಾ ಕೃಪಾ ಪೋಷಿತ ನಾಟಕ ಮಂಡಳಿಯಲ್ಲಿ ಅಭಿನಯಿಸುತ್ತಲಿರುವುದಾಗಿಯೂ ಹೇಳಿದ್ದಾರೆ. ಆದರೆ ಇತ್ತೀಚಿನ ಬೆಳವಣಿಗೆಗಳನ್ನು ನೋಡಿದರೆ ಇಂದಿರಾ ಕೃಪಾ ಪೋಷಿತ ನಾಟಕ ಮಂಡಳಿ ಎನ್ನುವುದಕ್ಕಿಂತಲೂ ಇದು "ಸಂಜಯ ಕೃಪಾ ಪೋಷಿತ ನಾಟಕ ಮಂಡಳಿ" ಎನ್ನುವುದೇ ಸೂಕ್ತ.

○

ಸಂಪಾದಕೀಯ

(ಒಂದನೇ ಪುಟದಿಂದ)

ಹಕ್ಕನ್ನು ಅಲ್ಲಿಯ ಸರಕಾರ ಘೋಷಿಸಿದ ಸಂದರ್ಭದಲ್ಲಿ ಕೆಲವರಿಂದ ಪ್ರತಿಭಟನೆ ಬಂದಿತ್ತು. ಪಶ್ಚಿಮ ಬಂಗಾಲ ಸರಕಾರದ ಈ ದಿಟ್ಟ ಹೆಜ್ಜೆಯ ಬಗ್ಗೆಯೂ ಕೆಲ ಸ್ಥಾಪಿತ ಹಿತಾಸಕ್ತಿಗಳಿಂದ ಪ್ರತಿಭಟನೆ ಬರಬಹುದು. ಕಳೆದ ಮೂರು ವರ್ಷಗಳಲ್ಲಿ ಪಶ್ಚಿಮ ಬಂಗಾಲದ ಎಡಪಕ್ಷಗಳ ಸಂಯುಕ್ತ ಸರಕಾರ ರಾಜ್ಯದಲ್ಲಿ ಭೂಸುಧಾರಣೆ, ಕೃಷಿಕೆಲಸಗಾರರಿಗೂ, ಬಡರೈತರಿಗೂ ಅನುಕೂಲ ಮಾಡುವ ಶಾಸನಗಳು, ಕಾರ್ಮಿಕರಿಗೆ ವೇತನ ಹೆಚ್ಚಳ ಮುಂತಾದ ಅನೇಕ ಕ್ರಮಗಳನ್ನು ಕೈಗೊಂಡು ಉತ್ತಮ ಆಡಳಿತೆಯನ್ನು ಒದಗಿಸಿದೆ. ಇದರಿಂದಲೇ ಅದು ಜನತೆಯ ಪ್ರೀತ್ಯಾದರವನ್ನು ಗಳಿಸಿದೆ. ಸರಕಾರಿ ನೌಕರರ ದೀರ್ಘಕಾಲದ ವಸಾಹತುಶಾಹೀ ಗುಲಾಮಗಿರಿಯನ್ನು ಈ ಸರಕಾರ ಈಗ ಕೊನೆಗೊಳಿಸಿ ಅವರ ಮೂಲಭೂತ ಹಕ್ಕಾದ ಟ್ರೇಡ್ ಯೂನಿಯನ್ ಹಕ್ಕನ್ನು ಮನ್ನಣೆ ಮಾಡಿ ಎಲ್ಲ ಸರಕಾರಿ ನೌಕರರಿಗೂ ಒಂದು ವರದಾನ ಮಾಡಿದಂತಾಗಿದೆ. ಇಂಥಹ ಕ್ರಾಂತಿಕಾರಿ ದಿಟ್ಟ ಹೆಜ್ಜೆಯನ್ನಿಟ್ಟ ಪಶ್ಚಿಮ ಬಂಗಾಳ ಸರಕಾರಕ್ಕೆ ನಮ್ಮ ಹೃತ್ಪೂರ್ವಕ ವಂದನೆಗಳು. ಇತರ ರಾಜ್ಯ ಸರಕಾರಗಳೂ ಈ ಹಾದಿಯಲ್ಲಿ ಮುನ್ನಡೆಯಲೆಂದು ನಾವು ಹಾರೈಸುತ್ತೇವೆ.

○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT